ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ನವೆಂಬರ್ 12, 2021

ಸಂಪುಟ : 48 ಸಂಚಿಕೆ : 181 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com

## ವೀರಶೈವ ಲಿಂಗಾಯತ ಎರಡು ಒಂದೇ ಬೇರ್ಪಡಿಸಲು ಯಾರಿಗೂ ಸಾಧ್ಯವಿಲ್ಲ



ಹಾಲಕೆರೆ ಶ್ರೀ ಅನ್ನದಾನೇಶ್ವರ ಸಂಸ್ಥಾನದ ನೂತನ ಜಗದ್ಗುರುಗಳ ಚರಪಟ್ಟಾಧಿಕಾರ ಮಹೋತ್ಸವದಲ್ಲಿ ಎಸ್ಸೆಸ್

ಗದಗ, ನ.11- ವೀರಶೈವ ಲಿಂಗಾಯತ ಎರಡು ಒಂದೇ. ಇನ್ನು ಮುಂದೆ ಬೇರ್ಪಡಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆದ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಹೇಳಿದರು.

ಗದಗ ಜಿಲ್ಲೆಯ ಹಾಲಕೆರೆಯಲ್ಲಿ ನಿನ್ನೆ ನಡೆದ ಹಾಲಕೆರೆ ಶ್ರೀ ಅನ್ನದಾನೀಶ್ವರ ಸಂಸ್ಥಾನದಿಂದ ಏರ್ಪಾಡಾಗಿದ್ದ ಗುರುವಂದನೆ ಹಾಗೂ ನೂತನ ಜಗದ್ಗುರುಗಳಿಗೆ ಚರಪಟ್ಟಾಧಿಕಾರ ಮಹೋತ್ಸವದಲ್ಲಿ ಡಾ. ಅಭಿನವ ಅನ್ನದಾನ ಮಹಾಸ್ವಾಮಿಗಳವರ ಸಾಧನೆ ಕುರಿತ ಗ್ರಂಥವನ್ನು ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

ವೀರಶೈವ - ಲಿಂಗಾಯತವನ್ನು ಬೇರ್ಪಡಿಸಲು ಕೆಲವರು ಹವಣಿಸುತ್ತಿದ್ದಾಗ, ಎರಡು ಒಂದೇ ಎಂದು ಸಮರ್ಥವಾಗಿ ಪ್ರತಿಪಾದಿಸಿ, ಮಾರ್ಗದರ್ಶನ ನೀಡಿದ ಶ್ರೀ ಅಭಿನವ ಅನ್ನದಾನ ಮಹಾಸ್ವಾಮಿಗಳವರ ಸೇವೆ ಅನನ್ಯ ಅಮೋಘ ಎಂದು ಅವರು ಶ್ಲಾಘಿಸಿದರು.

ಸಮಾಜಕ್ಕೆ ಧಕ್ಕೆ ಬಂದಾಗ ಶ್ರೀ ಅಭಿನವ ಅನ್ನದಾನ ಮಹಾಸ್ವಾಮಿಗಳವರು ಅಖಿಲ ಭಾರತ ವೀರಶೈವ ಮಹಾಸಭಾಕ್ಕೆ ಮಾರ್ಗ ದರ್ಶನ ನೀಡಿದ್ದರಿಂದ ಸಮಾಜ ಇನ್ನೂ ಗಟ್ಟಿಯಾಗಿದೆ. ಇದರಲ್ಲಿ ಕೆಲವು ಹಿತಾಸಕ್ತಿಗಳು ಸಮಾಜವನ್ನು ಛಿದ್ರ ಮಾಡಲು ಶ್ರಮಿಸುತ್ತಿದ್ದಾರೆ. ಅಂತಹ ವರದಿಗಳಿಗೆ ಕಿವಿಗೊಡಬೇಡಿ. ಇಂತಹ ಸಂದರ್ಭದಲ್ಲಿ ವೀರಶೈವ ಪಂಚಮಸಾಲಿ ಸಮಾಜದವರು ಮೂರನೇ ಪೀಠ ಮಾಡುವುದು ಸರಿಯಲ್ಲವೆಂದು ಆಕ್ಷೇಪಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ರಕ್ತದಾನ ಶಿಬಿರ ನಡೆಸಿ, ರಕ್ತ ಸಂಗ್ರಹಿಸಿ ಸಾವಿರಾರು ಜನರ ಪ್ರಾಣ ಉಳಿಸಿದ್ದಾರೆ. ಅಲ್ಲದೇ ರೈತರ ಸಮಾವೇಶ ಮಾಡಿ, ಸಾವಯವ ಗೊಬ್ಬರದ ಮಹತ್ವ ತಿಳಿಸಿಕೊಟ್ಟ ಶ್ರೀಗಳವರ ಸೇವೆ ಶಾಶ್ವತವಾದದ್ದು ಎಂದು ನುಡಿದರು.

ಕಿರಿಯ ಶ್ರೀಗಳಿಗೆ ಪೀಠಾಧಿಕಾರ ವಹಿಸಿಕೊಡುವುದು ತಂದೆ - ಮಕ್ಕಳ ಸಂಬಂಧವಿದ್ದಂತೆ. ಆದ್ದರಿಂದ ಹಿರಿಯ ಜಗದ್ಗುರುಗಳ ಯೋಗಕ್ಷೇಮ ವಿಚಾರ ಮಾಡುವುದು ಕಿರಿಯರ ಕರ್ತವ್ಯ, ಅವರಿಗೆ ಕಿಂಚಿತ್ತು ಅಪವಾದ ಬರದಂತೆ ನೋಡಿಕೊಳ್ಳಬೇಕೆಂದು (3ನೇ ಪುಟಕ್ಕೆ)

# ಬಿಟ್ ಕಾಯಿನ್ ವಿಚಾರ ಬಿಟ್ಹಾಕಿ

## ದಿಟ್ಟತನದಿಂದ ಜನಪರ ಕೆಲಸ ಮಾಡಿ ಎಂದು ಸಿಎಂಗೆ ವರಿಷ್ಠರ ಸಲಹೆ

ಬೆಂಗಳೂರು, ನ. 11 - ಬಿಟ್ ಕಾಯಿನ್ ಹಗರಣದಲ್ಲಿ ನನ್ನ ಪಾತ್ರ ಇಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಧಾನಿ ನರೇಂದ್ರ ಮೋದಿ ಅವರ ಗಮನಕ್ಕೆ ತಂದಿದ್ದಾರೆ.

ಇದನ್ನೇ ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಬಳಿಯೂ ಪ್ರಸ್ತಾಪಿಸಿದ್ದಾರೆ.

ಹಗರಣಕ್ಕೆ ಸಂಬಂಧಿಸಿದಂತೆ ವಿವರಣೆ ನೀಡಲೆಂದೇ ಎರಡು ದಿನಗಳ ದೆಹಲಿ ಪ್ರವಾಸ ಕೈಗೊಂಡಿರುವ ಮುಖ್ಯಮಂತ್ರಿ ಅವರು, ಗುರುವಾರ ಬೆಳಗ್ಗೆ ಸುಮಾರು ಒಂದು ಗಂಟೆಗಳ ಕಾಲ ಪ್ರಧಾನಿ ಅವರನ್ನು ಭೇಟಿ ಮಾಡಿ ಹಗರಣ ಸೇರಿದಂತೆ ರಾಜ್ಯದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನೂ ಅವರ ಗಮನಕ್ಕೆ ತಂದಿದ್ದಾರೆ.

ಪ್ರಧಾನಿ ಭೇಟಿಗೂ ಮುನ್ನ ಬೊಮ್ಮಾಯಿ ಅವರು ನಿನ್ನೆ ತಡರಾತ್ರಿ ಗೃಹ ಸಚಿವರು ಹಾಗೂ ಪಕ್ಷದ ಅಧ್ಯಕ್ಷರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಇದರ ಪ್ರಸ್ತಾಪ ಮಾಡಿದ್ದರು.

ಬಿಟ್ ಕಾಯಿನ್ ಹಗರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ನಾಯಕರು ಮುಖ್ಯಮಂತ್ರಿ ಅವರಿಂದ ಮಾಹಿತಿ ಪಡೆದುಕೊಂಡಿದ್ದಾರೆ, ಆದರೆ, ಅವರುಗಳು ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲ ಎಂದು ತಿಳಿದು ಬಂದಿದೆ.

ಪ್ರಧಾನಿ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ಬಿಟ್ ಕಾಯಿನ್ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನಿಂದ ವರಿಷ್ಠರು ಯಾವುದೇ ಮಾಹಿತಿ ಕೇಳಿಲ್ಲ. ಆದರೂ ನಾನೇ ಸ್ವಯಂ ಪ್ರೇರಿತವಾಗಿ ಪ್ರಧಾನಿ ಅವರ ಬಳಿ ಪ್ರಸ್ತಾಪಕ್ಕೆ ಮುಂದಾದಾಗ, ಅದರ ಬಗ್ಗೆ ಆಸಕ್ತಿ ತೋರದೆ, ಇಂತಹ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ, ನೀವು ನಿಷ್ಠೆ ಮತ್ತು ದಿಟ್ಟತನದಿಂದ ಜನಪರ ಕೆಲಸ ಮಾಡಿ ಎಂದು ಸಲಹೆ ನೀಡಿದ್ದಾಗಿ ತಿಳಿಸಿದರು.

**ಬಿಟ್ ಕಾಯಿನ್‌ನಲ್ಲಿ ನನ್ನ ಪಾತ್ರವಿಲ್ಲ ಎಂದು ಪ್ರಧಾನಿಗೆ ತಿಳಿಸಿದ್ದೇನೆ - ಸಿಎಂ ಬೊಮ್ಮಾಯಿ**

ಭೇಟಿ ಸಂದರ್ಭದಲ್ಲಿ ಆಡಳಿತಾತ್ಮಕ ವಿಷಯಗಳ ಬಗ್ಗೆಯೇ ಹೆಚ್ಚು ಚರ್ಚೆಯಾಯಿತು ಮತ್ತು ಅವರು ನಮಗೆ ಕೆಲವು ಸಲಹೆ-ಸೂಚನೆಗಳನ್ನು ನೀಡಿದ್ದಾರೆ. ತಮ್ಮ 100 ದಿನಗಳ ಆಡಳಿತದ ಬಗ್ಗೆ ಪ್ರಧಾನಿ ಅವರಿಗೆ ಮಾಹಿತಿ ನೀಡಿದೆ, ಅದರಲ್ಲೂ ರೈತ ಮಕ್ಕಳ ಶಿಕ್ಷಣಕ್ಕೆ ತೆಗೆದುಕೊಂಡಿರುವ ಕಾರ್ಯಕ್ರಮ ಮತ್ತು ಅಮೃತ್ ಯೋಜನೆ ಬಗ್ಗೆ ಪ್ರಸ್ತಾಪಿಸಿದೆ ಎಂದು ಬೊಮ್ಮಾಯಿ ಹೇಳಿದ್ದಾರೆ.

ರೈತರ ಮಕ್ಕಳ ಶಿಕ್ಷಣಕ್ಕೆ ನೆರವಿನ ಯೋಜನೆ ದೇಶದಲ್ಲೇ ಮೊದಲು, ಇದನ್ನು ಯಶಸ್ವಿಗೊಳಿಸಿ ನಂತರ ಇದನ್ನು ಇಡೀ ರಾಷ್ಟ್ರಕ್ಕೆ ವಿಸ್ತರಿಸೋಣ ಎಂದರು. ನಂತರ ಅಮೃತ್ (3ನೇ ಪುಟಕ್ಕೆ)

## ಮುಖ್ಯಮಂತ್ರಿ ಬದಲಾವಣೆ ಇಲ್ಲ

ದಾವಣಗೆರೆ, ನ. 11 - ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಬದಲಾವಣೆಯ ಮಾತುಗಳು ಕಪೋಲ ಕಲ್ಪಿತ ಎಂದಿರುವ ಬಿಜೆಪಿ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ, ಆಡಳಿತ ಯಂತ್ರ ಕುಂಠಿತಗೊಳಿಸಲು ಕಾಂಗ್ರೆಸ್ ಬದಲಾವಣೆಯ ಹೇಳಿಕೆ ನೀಡುತ್ತಿದೆ ಎಂದಿದ್ದಾರೆ.



ಬಿಟ್‌ಕಾಯಿನ್ ವಿಷಯದಲ್ಲಿ ಸಾಕ್ಷಿಗಳಿದ್ದರೆ ಕಾಂಗ್ರೆಸ್ ಜನರ ಮುಂದೆ ತರಲಿ

ಝೂನ್ಸಿ ಕಿಯಾ ಶೋ ರೂಂ ಉದ್ಘಾಟನೆಗಾಗಿ ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ತಮ್ಮನ್ನು ಭೇಟಿ ಮಾಡಿದ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಕಾಂಗ್ರೆಸ್ ವಿನಾ ಕಾರಣ ಮುಖ್ಯಮಂತ್ರಿ ಬೊಮ್ಮಾಯಿ ಅವರ ಹೆಸರನ್ನು ಬಿಟ್‌ಕಾಯಿನ್ ವಿಷಯದಲ್ಲಿ ಎಳೆದು ತರುತ್ತಿದೆ. ಕಾಂಗ್ರೆಸ್‌ನ ಆರೋಪಗಳಲ್ಲಿ ಸತ್ಯಾಂಶವಿಲ್ಲ ಎಂದವರು ಹೇಳಿದ್ದಾರೆ.

ಬಿಟ್‌ಕಾಯಿನ್ ವಿಷಯಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮುಖಂಡರ ಬಳಿ ಪುರಾವೆಗಳಿದ್ದರೆ ಜನತೆ ಮುಂದೆ ತರಬೇಕು. ಆಧಾರ ರಹಿತ ಆರೋಪ ಕಾಂಗ್ರೆಸ್ ನಾಯಕರಿಗೆ ಶೋಭೆ ತರುವಂಥದ್ದಲ್ಲ ಎಂದ ಅವರು, ಮೂರ್ನಾಲ್ಕು ವರ್ಷಗಳ ಹಿಂದೆ ನಡೆದ ಬಿಟ್‌ಕಾಯಿನ್ ಪ್ರಕರಣವನ್ನು ಈಗ ಕಾಂಗ್ರೆಸ್ ಕೆದಕುತ್ತಿದೆ. ತನಿಖೆ ನಡೆಸಿದ ನಂತರ ವಿಷಯ ಬಯಲಾಗಲಿದೆ ಎಂದವರು ಹೇಳಿದರು.

ಮುಖ್ಯಮಂತ್ರಿ ಬದಲಾವಣೆಯಾಗಲಿದೆ ಎಂದು ಕಾಂಗ್ರೆಸ್ ನಾಯಕ ಪ್ರಿಯಾಂಕ್ ಖರ್ಗೆ ಹೇಳಿದ್ದನ್ನು ತಳ್ಳಿ ಹಾಕಿದ ವಿಜಯೇಂದ್ರ, ಕಾಂಗ್ರೆಸ್ ಮುಖಂಡರೊಬ್ಬರು ಹೇಳಿದ ಕಾರಣಕ್ಕೆ ಮುಖ್ಯಮಂತ್ರಿ ಬದಲಾವಣೆ ಮಾಡುವ ಪ್ರಶ್ನೆ ಇಲ್ಲ. ಬೊಮ್ಮಾಯಿ ಮುಖ್ಯಮಂತ್ರಿಯಾಗಿ ಉತ್ತಮ ಆಡಳಿತ (3ನೇ ಪುಟಕ್ಕೆ)

## ಡಿಡಿಪಿಐ ಆಗಿ ಜಿ.ಆರ್. ತಿಪ್ಪೇಶಪ್ಪ



ದಾವಣಗೆರೆ, ನ.11- ದಾವಣಗೆರೆ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ (ಆಡಳಿತ) ರಾಗಿ ಜಿ.ಆರ್. ತಿಪ್ಪೇಶಪ್ಪ ನೇಮಕಗೊಂಡಿದ್ದಾರೆ.

ಚಿತ್ರದುರ್ಗದ ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರವಾಚಕರಾಗಿ ಸೇವೆ ಸಲ್ಲಿಸುತ್ತಿದ್ದ ತಿಪ್ಪೇಶಪ್ಪ ಅವರನ್ನು ದಾವಣಗೆರೆ ಡಿಡಿಪಿಐ ಯನ್ನಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ನಿನ್ನೆ ಆದೇಶ ಹೊರಡಿಸಿದೆ. ಈವರೆಗೂ ದಾವಣಗೆರೆ ಡಿಡಿಪಿಐ ಆಗಿದ್ದ ಸಿ.ಆರ್. ಪರಮೇಶ್ವರಪ್ಪ ಅವರನ್ನು ಜಿ.ಆರ್. ತಿಪ್ಪೇಸ್ವಾಮಿ ಅವರಿಂದ ತೆರವಾಗಿರುವ ಸ್ಥಾನಕ್ಕೆ ಸರ್ಕಾರ ವರ್ಗಾಯಿಸಿದೆ.

## ಚೀನಾ: ಜಿನ್‌ಪಿಂಗ್ ಮೂರನೇ ಅವಧಿಗೆ ಕಮ್ಯುನಿಸ್ಟ್ ಸಮ್ಮತಿ

ಬೀಜಿಂಗ್, ನ. 11 – ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ದಾಖಲೆಯ ಮೂರನೇ ಅವಧಿಗೆ ಮುಂದುವರೆಯಲು ಚೀನಾದ ಆಡಳಿತಾರೂಢ ಕಮ್ಯುನಿಸ್ಟ್ ಪಕ್ಷದ ಉನ್ನತ ಹಂತದ ಸಭೆಯಲ್ಲಿ ಅನುಮತಿ ನೀಡಲಾಗಿದೆ. (2ನೇ ಪುಟಕ್ಕೆ)

## ಆದರ್ಶ ಸಮಾಜ ನಿರ್ಮಾಣದ ಪ್ರತಿಪಾದಕ ಸರ್ವಜ್ಞ: ರುಮ್ಮಾ

ದಾವಣಗೆರೆ, ನ.11- ಪ್ರತಿಯೊಂದು ವಿಚಾರಗಳ ಕುರಿತು ನೇರ, ನಿಷ್ಠೂರ ಮತ್ತು ಪ್ರಖರವಾದ ಅಧ್ಯಾತ್ಮಿಕ ಆಲೋಚನೆಗಳೊಂದಿಗೆ ಜನರಿಗೆ ಮುಟ್ಟುವಂತೆ ವಿಚಾರಗಳನ್ನು ಹೇಳಿದ ಸರ್ವಜ್ಞ, ಆದರ್ಶ ಸಮಾಜ ನಿರ್ಮಾಣದ ಪ್ರತಿಪಾದಕ ಎಂದು ಕಲ್ಬುರ್ಗಿಯ ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಪ್ರೊ. ಶಿವಗಂಗಾ ರುಮ್ಮಾ ಅಭಿಪ್ರಾಯಪಟ್ಟರು.

ದಾವಣಗೆರೆ ವಿಶ್ವವಿದ್ಯಾನಿಲಯ ಆವರಣದಲ್ಲಿ ಬುಧವಾರ ಏರ್ಪಡಿಸಿದ್ದ ಸರ್ವಜ್ಞ ಪೀಠ ಉದ್ಘಾಟನೆ ಮತ್ತು ಸರ್ವಜ್ಞನ ವಚನಗಳ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ವಿಶೇಷ ಉಪನ್ಯಾಸ ನೀಡಿದ ಅವರು, ತತ್ವ, ಸಿದ್ಧಾಂತಗಳನ್ನು ಮೀರಿ ವಾಸ್ತವದ ವಿಚಾರಗಳನ್ನು ನಿರ್ಭಿಡೆಯಿಂದ ಹೇಳಿದ ಸರ್ವಜ್ಞ ನಿಜವಾದ ಸಮಾಜವಾದಿ ಎಂದರು.



ದಾವಣಗೆರೆ ವಿವಿಯಲ್ಲಿ ಸರ್ವಜ್ಞ ಪೀಠ ಉದ್ಘಾಟನೆ ಮತ್ತು ಸರ್ವಜ್ಞನ ವಚನಗಳ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ

ಸರ್ವಜ್ಞನ ವಚನಗಳು ಆಧ್ಯಾತ್ಮಿಕ ಚಿಂತನೆಗಳಷ್ಟೇ ಅಲ್ಲ, ಹಲವಾರು ವೈಚಾರಿಕ ವಿಚಾರಗಳನ್ನು ತೆರೆದಿಡುತ್ತವೆ. ಸಮಾಜದ ಆಗು ಹೋಗುಗಳನ್ನು ಸಾಂದರ್ಭಿಕವಾಗಿ, ಸನ್ನಿವೇಶಕ್ಕೆ ತಕ್ಕಂತೆ ತಿಳಿಸಲಾಗಿದೆ. ಅದರಲ್ಲಿರುವ ಪ್ರತಿಯೊಂದು ವಿಚಾರವೂ ಸತ್ಯ ನಿಷ್ಠ, ಸುಂದರ ಸಮಾಜ ನಿರ್ಮಾಣದ ಪರಿಕಲ್ಪನೆಯನ್ನು ಹೊಂದಿವೆ ಎಂದು ತಿಳಿಸಿದರು.

ಮೌಲ್ಯಾಧಾರಿತ ಜೀವನ ಅತಿಮುಖ್ಯ. (2ನೇ ಪುಟಕ್ಕೆ)

## ಯುರೋಪ್ ಮತ್ತೆ ತತ್ತರ

### ಕೊರೊನಾ ಸೋಂಕಿತರಿಂದ ತುಂಬಿಕೊಳ್ಳುತ್ತಿರುವ ಆಸ್ಪತ್ರೆಗಳು: ಮಧ್ಯ ಏಷಿಯಾದಲ್ಲೂ ಏರಿಕೆ ಆತಂಕ



ನವದೆಹಲಿ, ನ. 11 – ವಿಶ್ವದ ಹಲವಾರು ದೇಶಗಳು ಕೊರೊನಾ ಸೋಂಕು ಕಡಿಮೆಯಾದ ಹಿನ್ನೆಲೆಯಲ್ಲಿ ನಿರ್ಬಂಧಗಳನ್ನು ಸಡಿಲಿಸುತ್ತಿದ್ದರೆ, ಯುರೋಪ್ ಹಾಗೂ ಮಧ್ಯ ಏಷಿಯಾದ ಕೆಲ ದೇಶಗಳು ಕೊರೊನಾದ ಮತ್ತೊಂದು ಅಲೆಯಿಂದ ತತ್ತರಿಸಿವೆ.

ಯುರೋಪ್ ಮತ್ತೆ ಕೊರೊನಾದ ಕೇಂದ್ರವಾಗಿದೆ ಎಂದು ವಿಶ್ವ ಆರೋಗ್ಯ ಸಂಘಟನೆಯ ಇತ್ತೀಚಿನ ವರದಿಗಳು ತಿಳಿಸಿವೆ. ಮಧ್ಯ ಏಷಿಯಾದಲ್ಲೂ ಕೊರೊನಾ ಪ್ರಕರಣಗಳು ಆತಂಕ ತರುವ ರೀತಿಯಲ್ಲಿ ಏರಿಕೆಯಾಗುತ್ತಿವೆ.

ಕೊರೊನಾ ಅಲೆಯ ಮತ್ತೊಂದು ಮಹತ್ವದ ಘಟ್ಟದಲ್ಲಿ ನಾವಿದ್ದೇವೆ. ಯುರೋಪ್ ಮತ್ತೆ ಕೊರೊನಾದ ಕೇಂದ್ರವಾಗಿದೆ ಎಂದು ಡಬ್ಲ್ಯೂ.ಹೆಚ್.ಒ. ಯುರೋಪ್ ಮುಖ್ಯಸ್ಥ ಹ್ಯಾನ್ಸ್ ಕ್ಲುಗೆ ಹೇಳಿದ್ದಾರೆ. ವಿಶ್ವದಾದ್ಯಂತ ಕಳೆದ ವಾರ ಕಂಡು ಬಂದ ಕೊರೊನಾ ಪ್ರಕರಣಗಳಲ್ಲಿ ಅರ್ಧದಷ್ಟು ಯುರೋಪ್‌ನದ್ದಾಗಿವೆ. ಕಳೆದ ನಾಲ್ಕು ದಿನಗಳಲ್ಲಿ ಈ ಭಾಗದಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ ಎಂದು ಅಂದಾಜಿಸಲಾಗಿದೆ. ರಷ್ಯಾದಾದ್ಯಂತ ಆಸ್ಪತ್ರೆಗಳು ಕೊರೊನಾ ಸೋಂಕಿತರಿಂದ ತುಂಬಿಕೊಂಡಿವೆ. ಸೋಂಕಿತರಿಗೆ ನಿಯೋಜಿಸಲಾದ 3 ಲಕ್ಷ ಬೆಡ್‌ಗಳಲ್ಲಿ ಶೇ.82.8ರಷ್ಟು ಭರ್ತಿಯಾಗಿವೆ ಎಂದು ಅಲ್ಲಿನ ಉಪಪ್ರಧಾನಿ ಟಟ್ಯಾನಾ ಗೊಲಿಕೊವ ಹೇಳಿದ್ದಾರೆ.

ಲಸಿಕೆ ಪ್ರಮಾಣ ಕಡಿಮೆ ಇರುವುದು ಹಾಗೂ ಸರ್ಕಾರ ನಿರ್ಬಂಧಗಳನ್ನು ಹೇರದಿರುವುದೇ ಸಮಸ್ಯೆ ಉಲ್ಬಣಿಸಲು ಕಾರಣ ಎನ್ನಲಾಗುತ್ತಿದೆ. ರಷ್ಯಾದ ಶೇ.40ಕ್ಕೂ ಕಡಿಮೆ ಜನರು ಎರಡು ಪೂರ್ಣ ಲಸಿಕೆ ಪಡೆದಿದ್ದಾರೆ.

ಕಳೆದ ವಾರ ರಷ್ಯಾದಲ್ಲಿ ಲಾಕ್‌ಡೌನ್ ಹೇರಿಕೆ ಮಾಡಲಾಗಿತ್ತು. ನವೆಂಬರ್ 7ರಂದು ಅಂತ್ಯವಾದ ಲಾಕ್‌ಡೌನ್ (3ನೇ ಪುಟಕ್ಕೆ)

## ಕೊರೊನಾ: ಹೋರಾಟ ಅಂತಿಮ ಹಂತದಲ್ಲಿದೆ

ನವದೆಹಲಿ, ನ. 11 – ಕೊರೊನಾ ವಿರುದ್ಧದ ಹೋರಾಟ ಅಂತಿಮ ಹಂತದಲ್ಲಿದೆ ಎಂದಿರುವ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ, ಸೋಂಕಿನ ವಿರುದ್ಧದ ಹೋರಾಟ ಸಂಪೂರ್ಣ ಮುಗಿಯುವವರೆಗೆ ಎಚ್ಚರ ತಪ್ಪಬಾರದು ಎಂದಿದ್ದಾರೆ.

12 ಕೋಟಿ ಜನರು ಎರಡನೇ ಡೋಸ್ ಲಸಿಕೆ ಪಡೆಯಬೇಕಿದ್ದು, ಅವರು ಲಸಿಕೆ ಪಡೆಯಲು ಉತ್ತೇಜನ ನೀಡಬೇಕು ಎಂದು ಮಾಂಡವೀಯ ರಾಜ್ಯಗಳಿಗೆ (3ನೇ ಪುಟಕ್ಕೆ)

SPOT ADMISSION
SUSHRUTHA
INSTITUTE OF PHARMACY
Near Ramnagara, Davangere
Affiliated by PCI, Reg. by GOK
D. PHARM
(Two Year)
Last Chance - Few Seat Available

Salient Features :
Fees Instalment
Hostel Facility for Boys/Girls
Scholarship Assistance
Highly Experienced / Qualified Faculty
For more info. Contact
Principal : +918147139924
Office : 8921985822, 8606857152

## ರಾಷ್ಟ್ರೀಯ ಶಿಕ್ಷಣ ನೀತಿ ವಿರುದ್ಧ ವಿದ್ಯಾರ್ಥಿಗಳಿಂದ ಪ್ರತಿಭಟನೆ





ದಾವಣಗೆರೆ, ನ.11- ಅತ್ಯಂತ ತರಾತುರಿಯಲ್ಲಿ ಎನ್‌ಇಪಿ-2020ರ ಹೇರಿಕೆ ಖಂಡಿಸಿ ಹಾಗೂ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಬಸ್‌ಪಾಸ್ ಒದಗಿಸಲು ಆಗ್ರಹಿಸಿ ನಗರದಲ್ಲಿಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಜೇಷನ್ (ಎಐಡಿಎಸ್‌ಓ) ನೇತೃತ್ವದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಜಯದೇವ ವೃತ್ತದಲ್ಲಿ ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ್ದ ವಿದ್ಯಾರ್ಥಿಗಳು, ಎಐಡಿಎಸ್‌ಓ ಪದಾಧಿಕಾರಿಗಳು, ಅಖಿಲ ಕರ್ನಾಟಕ ವಿದ್ಯಾರ್ಥಿಗಳ ಪ್ರತಿಭಟನಾ ದಿನದ ಅಂಗವಾಗಿ ಪ್ರತಿಭಟನಾ ಮೆರವಣಿಗೆ ಮುಖೇನ ಉಪವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ ಉಪವಿಭಾಗಾಧಿಕಾರಿಯಿಂದ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ-2020 ಅನ್ನು ಜಾರಿಗೆ ತರುತ್ತಿರುವ ರಾಜ್ಯ ಸರ್ಕಾರ ಹಿಂದಿನ ಶೈಕ್ಷಣಿಕ ನೀತಿಯಲ್ಲಿ ಯಾವ ಲೋಪ-ದೋಷಗಳಿದ್ದವು, ಯಾವ ಕಾರಣಕ್ಕೆ ನೂತನ ನೀತಿಯ ಅನುಷ್ಠಾನ ಆಗುತ್ತಿದೆ ಎಂಬ ವಿಷಯಗಳ ಬಗ್ಗೆ ಯಾವುದೇ ಉತ್ತರ ನೀಡಿಲ್ಲ. ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಕರ್ನಾಟಕ ರಾಜ್ಯದಲ್ಲಿ ಎನ್‌ಇಪಿ-2020 ಅನ್ನು ಅನುಷ್ಠಾನಕ್ಕೆ ತರಲು ನಿರ್ಧರಿಸಲಾಗಿದೆ. ಈ ನೀತಿಯನ್ನು ರಾಜ್ಯದ ಶಿಕ್ಷಣ ತಜ್ಞರು, ಉಪನ್ಯಾಸಕರು, ಸಾಹಿತಿಗಳು, ವಿದ್ಯಾರ್ಥಿಗಳು ಹಾಗೂ ಪೋಷಕರು ವ್ಯಾಪಕವಾಗಿ ವಿರೋಧಿಸಿದರೂ ಅಪ್ರಜಾತಾಂತ್ರಿಕವಾಗಿ, ತರಾತುರಿಯಲ್ಲಿ ಶಿಕ್ಷಣ ನೀತಿಯನ್ನು ಸರ್ಕಾರ ಜಾರಿ ಮಾಡುತ್ತಿದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಯಾವುದೇ ಪೂರ್ವಭಾವಿ ತಯಾರಿ ಇಲ್ಲದೇ ಏಕಾಏಕಿ ಎನ್‌ಇಪಿ-2020ರ ಭಾಗವಾಗಿರುವ ನಾಲ್ಕು ವರ್ಷದ ಪದವಿ ಕೋರ್ಸ್ ಅನ್ನು (2ನೇ ಪುಟಕ್ಕೆ)

## ವಿದೇಶದಿಂದ ಬರುವ 5 ವರ್ಷದೊಳಗಿನ ಮಕ್ಕಳಿಗೆ ಕೊರೊನಾ ಟೆಸ್ಟ್ ವಿನಾಯಿತಿ

ನವದೆಹಲಿ, ನ. 11 – ಭಾರತಕ್ಕೆ ವಿದೇಶದಿಂದ ಬರುವ ಐದು ವರ್ಷದೊಳಗಿನ ಮಕ್ಕಳಿಗೆ ಕೊರೊನಾ ಟೆಸ್ಟ್‌ನಿಂದ ವಿನಾಯಿತಿ ನೀಡಲಾಗಿದೆ.

ಆದರೆ, ಭಾರತಕ್ಕೆ ಬರುವಾಗ ಇಲ್ಲವೇ ಭಾರತದಲ್ಲಿ ಹೋಂ ಕ್ವಾರಂಟೈನ್‌ನಲ್ಲಿರುವಾಗ ಕೊರೊನಾ ಸೋಂಕಿನ ಲಕ್ಷಣಗಳು ಕಂಡು ಬಂದರೆ ಅವರಿಗೆ ಕೊರೊನಾ ಶಿಷ್ಟಾಚಾರಗಳ ಪ್ರಕಾರ ಚಿಕಿತ್ಸೆ ನೀಡಬೇಕು ಎಂದು ಕೇಂದ್ರ ಸರ್ಕಾರದ ನೂತನ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಪ್ರಥಮ ವರ್ಷದ ಪುಣ್ಯಸ್ಮರಣೆ

ಜನನ: 01.07.1930



ಮರಣ: 12.11.2020

ದಿ. ಶ್ರೀ ನರಸಿಂಹ ನರಹರಿ ಭಟ್
(ಶ್ರೀ ಸಿದ್ಧಿ ವಿನಾಯಕ ಪ್ರಾವಿಜನ್ ಸ್ಟೋರ್ಸ್‌ ಮಾಲೀಕರು)
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ ಮತ್ತು ನೀವು ಹಾಕಿ ಕೊಟ್ಟ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,
ಪತ್ನಿ, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು
ದುಃಖತಪ್ತ ಕುಟುಂಬ ವರ್ಗ
ಭಟ್ ವಂಶಸ್ಥರು, ದಾವಣಗೆರೆ
ಮೊ: 94485 88788, 72595 95996



ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ
ಶ್ರೀ ತರಳಬಾಳು ಜಗದ್ಗುರು
ಲಿಂಗೈಕ್ಯ ಶ್ರೀ ಗುರುಶಾಂತರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು



ವಿಶ್ವಬಂಧು ಮರುಳಸಿದ್ಧ
'ತರಳ! ಬಾಳು!'



ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ
ಶ್ರೀ ತರಳಬಾಳು ಜಗದ್ಗುರು
ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು

ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘ (ರಿ)
ಸಿರಿಗೆರೆ/ದಾವಣಗೆರೆ.

ಮೀಟಿಂಗ್ ನೋಟೀಸ್

ದಿನಾಂಕ : 07.11.2021 ರಂದು ಭಾನುವಾರ ಪತ್ರಿಕೆ ಹಾಗೂ ಮಾಧ್ಯಮಗಳಲ್ಲಿ ಕೆಲವರು ನಮ್ಮ ಮಠ ಮತ್ತು ಸಮಾಜದ ಗೌರವ, ಘನತೆಗೆ ಧಕ್ಕೆ ಬರುವಂತಹ ಸುಳ್ಳು ಆರೋಪ ಮತ್ತು ನಿಂದನೆಯ ಮಾತುಗಳನ್ನು ಆಡಿರುವ ಹಿನ್ನೆಲೆಯಲ್ಲಿ, ದಿನಾಂಕ : 19.11.2021 ರಂದು ಶುಕ್ರವಾರ ಬೆಳಗ್ಗೆ 11.00 ಗಂಟೆಗೆ ಸಿರಿಗೆರೆಯ ಶ್ರೀ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ಶ್ರೀ ತರಳಬಾಳು ಜಗದ್ಗುರು ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಸಮಾಜದ ಸಭೆಯನ್ನು ಕರೆಯಲಾಗಿದೆ.

ಎಲ್ಲಾ ತಾಲ್ಲೂಕುಗಳ ಅಧ್ಯಕ್ಷರು, ಪದಾಧಿಕಾರಿಗಳು, ಸಮಾಜದ ಹಿರಿಯರು ಮತ್ತು ಯುವಕರು ತಪ್ಪದೇ ಈ ಸಭೆಗೆ ಆಗಮಿಸಬೇಕಾಗಿ ಕೋರಿದೆ.

ಕೆ.ಆರ್. ಜಯದೇವಪ್ಪ
ಅಧ್ಯಕ್ಷರು, ಶ್ರೀಮತ್ ಸಾಧು ಸದ್ಧರ್ಮ ವೀರಶೈವ ಸಂಘ (ರಿ) ಸಿರಿಗೆರೆ/ದಾವಣಗೆರೆ.

**ಸುವರ್ಣಾವಕಾಶ**
ಕೊರೊನಾ ಸಮಯದಲ್ಲಿ ಉದ್ಯೋಗ ಕಳೆದುಕೊಂಡವರಿಗೆ ಉದ್ಯೋಗಾವಕಾಶ. ವಿದ್ಯಾರ್ಥಿಗಳು, ಸರ್ಕಾರಿ ನೌಕರರು, ನಿವೃತ್ತಿ ಆದವರು ಹಾಗೂ ಪ್ರತಿಯೊಬ್ಬರಿಗೂ ಪಾರ್ಟ್ ಟೈಮ್, ಫುಲ್ ಟೈಂ ಜಾಬ್ ಮಾಡಲು ಅದ್ಭುತ ಅವಕಾಶ. ಸಂಪರ್ಕಿಸಿ
**72592 22590**
**73532 68518**

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ದಾವಣಗೆರೆ ನಗರ ಹಾಗೂ ಸುತ್ತ ಸೈಟುಗಳು ಹಾಗೂ ಮನೆಗಳು ಮಾರಾಟಕ್ಕಿವೆ. (20×30, 30×40, 30×50, 40×60). ಸಂಪರ್ಕಿಸಿ
**97432 09680, 83101 50590**

**ಬೇಕಾಗಿದ್ದಾರೆ**
ಗಿಫ್ಟ್ ಶಾಪ್‌ನಲ್ಲಿ ಸೇಲ್ಸ್‌ಗರ್ಲ್ಸ್ ಆಗಿ ಕೆಲಸ ಮಾಡಲು ಪಿಯುಸಿ ಆಗಿರುವ ಹುಡುಗಿಯರು ಬೇಕಾಗಿದ್ದಾರೆ. ಆಸಕ್ತರು ಬಯೋಡಾಟಾ ಹಾಗೂ ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
**ಆರ್ಚೀಸ್ ಗ್ಯಾಲರಿ**
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
**ಮೊ : 96324-33166**

**ಮನೆ ಮಾರಾಟಕ್ಕಿದೆ**
ದಾವಣಗೆರೆ ತರಳಬಾಳು ಬಡಾವಣೆ, 2ನೇ ಮೇನ್, 3ನೇ ಕ್ರಾಸ್‌ನ ಕಾರ್ನರ್ ಗ್ರೌಂಡ್‌ಫ್ಲೋರ್‌ನಲ್ಲಿ 3 ಬೆಡ್ ರೂಂನ ಮನೆ ಹಾಗೂ ಮೊದಲ ಮಹಡಿಯಲ್ಲಿ 2 ಬೆಡ್ ರೂಂನ ಎರಡು ಮನೆಗಳು ಇರುವ ಬಿಲ್ಡಿಂಗ್ ಮಾರಾಟಕ್ಕಿದೆ.
**94814 52642**

**ಮನೆ ಬಾಡಿಗೆಗೆ, ಲೀಸ್‌ಗೆ ಇದೆ**
ಶಕ್ತಿನಗರದಲ್ಲಿ ಸಿಂಗಲ್ ಬೆಡ್ ರೂಂ ಹೊಂದಿರುವ ಮನೆ ಬಾಡಿಗೆಗೆ, ಲೀಸ್‌ಗೆ ದೊರೆಯುತ್ತದೆ.
**94484 39639 / 63665 96479**

**ಸೈಟ್ ಮಾರಾಟಕ್ಕೆ ಇವೆ**
**ಮಹಾಲಕ್ಷ್ಮಿ ಬಡಾವಣೆ 30×40 ಉತ್ತರ, ನಿಜಲಿಂಗಪ್ಪ ಬಡಾವಣೆ 30×35, ರಂಗನಾಥ ಬಡಾವಣೆ 30×60**
**97418 11694**

**ಬಾಡಿಗೆ/ ಲೀಸ್‌ಗೆ**
2 ಬೆಡ್‌ರೂಂ, ಅಟ್ಯಾಚ್ ಬಾತ್‌ರೂಂವುಳ್ಳ 4 ಮನೆಗಳು ಕುಂದುವಾಡ ಕೆರೆ ಹತ್ತಿರ ಮಹಾಲಕ್ಷ್ಮಿ ಲೇಔಟ್‌ನಲ್ಲಿ ಲಭ್ಯವಿರುತ್ತವೆ.
**(ಸಂಗಮ್ ಅಪಾರ್ಟ್‌ಮೆಂಟ್‌ನಲ್ಲಿ)**
**96388 17967**
**73380 43912**

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಆಯಾಗಳು ಮತ್ತು ನರ್ಸ್‌ಗಳು ಬೇಕಾಗಿದ್ದಾರೆ. ನುರಿತ ಅನುಭವವುಳ್ಳ A.N.M ಮತ್ತು G.N.M ಆದವರು. ಈ ಕೆಳಗಿನ ಮೊಬೈಲ್‌ಗೆ ತಮ್ಮ ಬಯೋಡೇಟಾದೊಂದಿಗೆ ಸಂಪರ್ಕಿಸಿ.
**98450 35710**

**ಬೆಂಗಳೂರಿನಲ್ಲಿ ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಗಂಡ, ಹೆಂಡತಿ ಇರುವವರು ಬೇಕು. ಬಟ್ಟೆ, ಪಾತ್ರೆ ನೆಲ, ಬಾತ್ ರೂಂ, ಕ್ಲೀನಿಂಗ್ ಕೆಲಸ. ರೂಂ ಉಚಿತ, ಸಂಬಳ 18000/-
**97400 98047, 9740098064**

**ಬೇಕಾಗಿದ್ದಾರೆ**
ದೇವರಾಜ ಅರಸ್ ಬಡಾವಣೆ 'ಸಿ' ಬ್ಲಾಕ್‌ನಲ್ಲಿರುವ ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ B.Sc. B.Ed (PCM, CBZ), B.Sc ಹಾಗೂ M.Sc (Maths) ತರಬೇತಿ ಹೊಂದಿದ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ
**99640 17729**

**ಬೇಕಾಗಿದ್ದಾರೆ**
ಬೇಕರಿಯಲ್ಲಿ ಅನುಭವವಿರುವ ಮೇನ್ ವರ್ಕರ್ (ಮಾಸ್ಟರ್) ಹಾಗೂ ಕೌಂಟರ್‌ನಲ್ಲಿ PUC ಆಗಿರುವ ಕಂಪ್ಯೂಟರ್‌ನಲ್ಲಿ ಅನುಭವವಿರುವ ಕೆಲಸಗಾರರು ಬೇಕಾಗಿದ್ದಾರೆ.
**ಸಂಪರ್ಕಿಸಿ: 80500 14620**

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ನಿರ್ವಹಿಸಲು ಅನುಭವವುಳ್ಳ ಯುವಕರು ಬೇಕಾಗಿದ್ದಾರೆ. 10 ಸಾವಿರ ರೂ.ಗೂ ಅಧಿಕ ಆಕರ್ಷಕ ವೇತನ ನೀಡಲಾಗುವುದು. ಆಸಕ್ತರು ಸಂಪರ್ಕಿಸಿ :
**ಶ್ರೀ ವಾಸವಿ ಮೆಡಿಕಲ್ ಎಂಪೋರಿಯಮ್**
ಪಿ.ಜೆ.ಬಡಾವಣೆ,ದಾವಣಗೆರೆ.
**ಮೊ.94488 31396**

**ಕೆಲಸಗಾರರು ಬೇಕಾಗಿದ್ದಾರೆ**
ಬ್ಯಾಡಗಿಯಲ್ಲಿರುವ ಹೋಟೆಲ್‌ಗೆ ಕೆಲಸಗಾರರು ಬೇಕಾಗಿದ್ದಾರೆ. ಪುರುಷರು, ಮಹಿಳೆಯರು, ಹುಡುಗರಿಗೆ ಆದ್ಯತೆ. (ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ)
**89710 05992**

**ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಅನುಭವವುಳ್ಳ ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ. ಉಚಿತ ಊಟ, ವಸತಿ ಹಾಗೂ ರೂ. 9000 ಸಂಬಳ + ಕಮೀಷನ್ ನೀಡಲಾಗುವುದು. Calling Timings 11.30 am 1.30 pm
**98863 14000**
**70224 60137**

**ಮನೆ ಬಾಡಿಗೆಗೆ/ಲೀಸ್‌ಗಿದೆ**
2 ಬೆಡ್‌ರೂಂ, ಕಾರ್ಪೊರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುವ, ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ 2ನೇ ಮಹಡಿ ಮನೆ ನಂ.1890/23, 4ನೇ ಮೇನ್, ಎಲ್‌ಐಸಿ ಕಾಲೋನಿ, ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ, ದಾವಣಗೆರೆ ಇಲ್ಲಿ ಬಾಡಿಗೆಗೆ/ಲೀಜ್‌ಗಿದೆ. ಸಂಪರ್ಕಿಸಿ.
**93410 12022**

**ವಿಚಾರಿಸಿರಿ**
ಹೊಲಕ್ಕೆ ಮತ್ತು ತೋಟಕ್ಕೆ ಉಪಯೋಗವಾಗುವಂತಹ ಬೂದಿ ಮತ್ತು ಇದ್ದಿಲು ನಮ್ಮಲ್ಲಿ ಉಚಿತವಾಗಿ ಲಭ್ಯವಿದೆ.
**98452 46944**

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ:
**ಅಮರಾವತಿ ಹಾಲಪ್ಪ**
**98454 84076**

**WANTED TEACHERS**
We r looking for qualified pre- school and primary class teachers ( LKG, UKG 1st to 5th std). English fluency is must Contact with your bio data
**96060-75754**

**ಮನೆ ಬೇಕಾಗಿದೆ**
4 ಬೆಡ್ ರೂಂ ಮತ್ತು ಫರ್ನೀಚರ್ಸ್ ಹೊಂದಿರುವ ಡ್ಯೂಪ್ಲೆಕ್ಸ್ ಮನೆ ಬಾಡಿಗೆಗೆ ಅಥವಾ ಲೀಸ್‌ಗೆ ಬೇಕಾಗಿದೆ. ಸಂಪರ್ಕಿಸಿ :
**78996 83444**
**77956 44408**

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಒಂದೂವರೆ ವರ್ಷದ ಮಗು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ.
**ಸಂಪರ್ಕಿಸಿ**
**98808 12989**

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಲೇಔಟ್, ಬನಶಂಕರಿ ಬಡಾವಣೆ, ರಂಗನಾಥ ಬಡಾವಣೆ, ಜಯನಗರ, ಜೆ.ಹೆಚ್. ಪಟೇಲ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ ಸೈಟುಗಳು ಮಾರಾಟಕ್ಕಿವೆ. ಕಮರ್ಷಿಯಲ್ ಮತ್ತು ಮನೆಗಳು, ಹೊಲ ಮಾರಾಟಕ್ಕಿವೆ.
**97315 12365**

**ಹಾಲ್/ಸಿಂಗಲ್ ಬೆಡ್ ರೂಂ ಹೌಸ್ ಬಾಡಿಗೆಗೆ ಇದೆ**
1ನೇ ಫ್ಲೋರ್ ನಲ್ಲಿ ಹಾಲ್ ಇದೆ ಹಾಗೂ 2ನೇ ಫ್ಲೋರ್ ನಲ್ಲಿ ಸಿಂಗಲ್ ಬೆಡ್ ರೂಂ ಇದೆ. ನರಸರಾಜ್ ರೋಡ್, ಗ್ಲಾಸ್ ಬಿಲ್ಡಿಂಗ್ ಎದುರು, ದಾವಣಗೆರೆ
**80504 07799**
**98804 85868**

**DAP :Dil Se Delivery**
**ತಕ್ಷಣ ಬೇಕಾಗಿದ್ದಾರೆ**
1) ಡಿಲೆವರಿ ಬಾಯ್
2) ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್
**7026127117**
**9380067441**

**ಮಾರಾಟಕ್ಕೆ**
ಸ್ವಾಮಿ ವಿವೇಕಾನಂದ ಬಡಾವಣೆ ಸೈಟ್ (ಪಶ್ಚಿಮ) 30×60, ಉತ್ತಮ ಚಂದ್ ಬಡಾವಣೆ ಸೈಟ್ (ಉತ್ತರ) 35×64, ವಿದ್ಯಾನಗರ ಸೈಟ್ (ದಕ್ಷಿಣ) 40×60, ತರಳಬಾಳು ಬಡಾವಣೆ ಸೈಟ್(ದಕ್ಷಿಣ) 30×50, SS ಲೇಔಟ್ ಸೈಟ್ - 40×63 ಮಹಾಲಕ್ಷ್ಮಿ ಲೇಔಟ್ ಸೈಟ್ ( ಉತ್ತಮ್ ಚಂದ್ - ಪಶ್ಚಿಮ) 35×61
**78996 36597, 99165 25828**

**Requirement**
SBI Group Company
Development Manager
Davanagere Branch
Age : 28 to 45
Salary : 20 to 35K
Qualification : Degree (Graduation)
Experience : 2 Years Exp.in Sales
**9886139595/9739249595**

**ಉದ್ಯೋಗಾವಕಾಶ**
ಯಾವುದೇ ವಿದ್ಯಾರ್ಹತೆ ಇದ್ದರೂ ಯುವಕ/ಯುವತಿಯರಿಗೆ ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ, ಪಾರ್ಟ್ ಟೈಮ್/ಫುಲ್ ಟೈಮ್‌ನಲ್ಲಿ ಮನೆಯಲ್ಲಿ ಕುಳಿತು ಕೆಲಸ ಮಾಡಿ ತಿಂಗಳಿಗೆ 10 ರಿಂದ 30 ಸಾವಿರದವರೆಗೆ ಗಳಿಸುವ ನಿಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವ ಅದ್ಭುತ ಸುವರ್ಣಾವಕಾಶ ಸಂಪರ್ಕಿಸಿ.
**88921 172729, 70194 26891**

**ಮನೆ ಬಾಡಿಗೆಗೆ ಇದೆ**
ಜಯನಗರ "A"ಬ್ಲಾಕ್ ನಲ್ಲಿ ಡಬಲ್ ಬೆಡ್ ರೂಂ ಹೊಂದಿರುವ ಉತ್ತರ ಅಭಿಮುಖವಾಗಿರುವ 1ನೇ ಮಹಡಿ ಮನೆ ಬಾಡಿಗೆಗೆ ಇದೆ.
**94484 39639 / 93536 53534**


# ಯೋಗದಿಂದ ಉತ್ತಮ ಆರೋಗ್ಯ ಪಡೆಯಲು ಕರೆ

ಹರಿಹರ, ನ.11- ಯೋಗ ಪ್ರಾಚೀನ ಕಾಲದಿಂದಲೂ ನಮಗೆ ಬಂದ ವರದಾನ. ಯೋಗದಿಂದ ಉತ್ತಮ ಆರೋಗ್ಯ ಪಡೆದು ಸ್ವಸ್ಥರಾಗಿರಬಹುದು ಎಂದು ದಾವಣಗೆರೆ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಅಭಿಪ್ರಾಯಪಟ್ಟರು.



ನಗರದ ಯಶಸ್ವಿನಿ ಕನ್ವೆನ್ಷನಲ್ ಹಾಲ್‌ನಲ್ಲಿ ಸಪ್ತರ್ಷಿ ಯೋಗ ಕೇಂದ್ರ ಮತ್ತು ಪ್ರೇರಣಾ ಫೌಂಡೇಶನ್ ಸಹಯೋಗದೊಂದಿಗೆ ಇಂದು ಹಮ್ಮಿಕೊಂಡಿದ್ದ ಗ್ಲೋಬಲ್ ವರ್ಲ್ಡ್ ರೆಕಾರ್ಡ್ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಶ್ರೀಗಳು ಆಶೀರ್ವಚನ ನೀಡಿದರು. ಜನರು ಹಪಾಹಪಿ ಜೀವನಕ್ಕೆ ಒಳಗಾಗಿದ್ದಾರೆ. ಕೇವಲ ಹಣದಿಂದ ನಮಗೆ ಉತ್ತಮ ಆರೋಗ್ಯ ಸಿಗುವುದಿಲ್ಲ. ಹಣದ ಹಿಂದೆ ಬಿದ್ದು ನೆಮ್ಮದಿ ಕಳೆದುಕೊಂಡು, ಆರೋಗ್ಯವನ್ನು ಕಳೆದುಕೊಂಡು ಜನರು ಒದ್ದಾಡುವುದು ಸಾಮಾನ್ಯವಾಗಿದೆ. ಶ್ರದ್ಧೆ, ಭಕ್ತಿ, ಪ್ರಾರ್ಥನೆ, ಯೋಗವನ್ನು ಜೀವನದಲ್ಲಿ ಅಳವಡಿಸಿಕೊಂಡರೆ ನೆಮ್ಮದಿಯ ಜೀವನ ಹೊಂದಲು ಸಾಧ್ಯ ಎಂದರು.

ನಗರಸಭೆ ಮಾಜಿ ಅಧ್ಯಕ್ಷ ಬಿ. ರೇವಣ ಸಿದ್ದಪ್ಪ ಮಾತನಾಡಿ, ಯೋಗ ಜೀವನದ ಒಂದು ಭಾಗವಾಗಬೇಕು. ಯೋಗ ಮತ್ತು ಕ್ರೀಡೆಯಿಂದ ಮನುಷ್ಯ ಸದಾ ಚಟುವಟಿಕೆಯಿಂದ ಇರಲು ಸಾಧ್ಯ ಎಂದ ಅವರು, ಜೈಮುನಿ ಅವರ ಸಾಧನೆಯನ್ನು ಅಭಿನಂದಿಸಿದರು.

ನಗರಸಭೆ ಸದಸ್ಯ ಶಂಕರ್ ಖಟಾವಕರ್, ಯಶಸ್ವಿನಿ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ವೈ. ಕೃಷ್ಣಮೂರ್ತಿ, ಗಂಗಾವತಿಯ ಗ್ಲೋಬಲ್ ವರ್ಲ್ಡ್ ರೆಕಾರ್ಡ್ ಸಮಿತಿ ಮಾಜಿ ಕಾರ್ಯದರ್ಶಿ ಬಾಬುಸಾಬ್, ಚಿಂತನ ಟಿವಿ ಹರಿಹರ ಸಂಸ್ಥಾಪಕ ಸುಬ್ರಹ್ಮಣ್ಯ ನಾಡಿಗೇರ್ ಅವರುಗಳು ಪ್ರಶಸ್ತಿ ವಿಜೇತರಿಗೆ ಹಾರೈಸಿದರು.

ಸಮಾರಂಭದಲ್ಲಿ ಅಂತರರಾಷ್ಟ್ರೀಯ ಯೋಗಿ ಅವಾರ್ಡ್‌ಗೆ ಭಾಜನರಾದ ಡಾ.ಕೆ. ಜೈಮುನಿ ಮತ್ತು ರಾಷ್ಟ್ರೀಯ ಯೋಗಿ ಅವಾರ್ಡ್‌ಗೆ ಭಾಜನರಾದ ಬಿ. ಸ್ವಪ್ನ ಮತ್ತು ಸವಿತಾ ಸಂತೋಷ್ ಜಾಧವ್ ಅವರಿಗೆ ಪ್ರಶಸ್ತಿ ವಿತರಿಸಲಾಯಿತು.

ಇದೇ ವೇಳೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಸೀತಾ ಎಸ್. ನಾರಾಯಣ್, ವೀರಪ್ಪ ಮತ್ತು ಸುಬ್ರಹ್ಮಣ್ಯ ನಾಡಿಗೇರ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಪ್ರೇರಣಾ ಫೌಂಡೇಶನ್ ಸಂಸ್ಥಾಪಕಿ ಜಿ.ಕೆ. ಉಷಾ ಮತ್ತು ಇತರರು ಉಪಸ್ಥಿತರಿದ್ದರು. ಅಣ್ಣಪ್ಪ ಪ್ರಾರ್ಥಿಸಿದರು. ಡಾ. ಡಿ. ಫ್ರಾನ್ಸಿಸ್ ಸ್ವಾಗತಿಸಿದರು. ನಳಿನಾ ಕಾರ್ಯಕ್ರಮ ನಿರೂಪಿಸಿದರು.

# ಎಲ್ಲಾ ಜನರ ಏಳಿಗಾಗಿ ಧರ್ಮಸ್ಥಳ ಯೋಜನೆ ಸಹಕಾರಿ

ಮಲೇಬೆನ್ನೂರು, ನ.11- ಕೇವಲ ಸಾಲಕ್ಕಾಗಿ ಮಾಡಿರುವ ಸ್ವಸಹಾಯ ಸಂಘಗಳು ಇವಲ್ಲ. ಜನರ ಬದುಕಿನಲ್ಲಿ ಹೊಸ ಬದಲಾವಣೆ ತರುವುದಕ್ಕಾಗಿ ಸಂಘಗಳನ್ನು ರಚಿಸಲಾಗಿದೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಲೇಬೆನ್ನೂರ ಯೋಜನಾಧಿಕಾರಿ ವಸಂತ್ ದೇವಾಡಿಗ ಹೇಳಿದರು.




ಜಿಗಳಿ ಗ್ರಾಮದ ಶ್ರೀ ಮಹೇಶ್ವರ ಸಮುದಾಯ ಭವನದಲ್ಲಿ ನಂದಿತಾವರೆ ವಲಯ ವ್ಯಾಪ್ತಿಯ ಒಕ್ಕೂಟದ ಪದಾಧಿಕಾರಿಗಳಿಗೆ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಆಡು ಮುಟ್ಟದ ಸೊಪ್ಪಿಲ್ಲ' ಎಂಬಂತೆ ಖಾವಂದರು ಮಾಡದ ಕಾರ್ಯವಿಲ್ಲ. ಎಲ್ಲಾ ಜನರ ಹಿತ ಬಯಸಿ ಸಂಘಗಳನ್ನು ರಚಿಸಿದ್ದಾರೆ. ರೈತರಿಗಾಗಿ ಪ್ರಗತಿ ಬಂಧು, ಮಹಿಳೆಯರಿಗಾಗಿ ಸ್ವ-ಸಹಾಯ ಸಂಘ, 60 ವರ್ಷ ದಾಟಿದ ಸದಸ್ಯರಿಗಾಗಿ ವಾತ್ಸಲ್ಯ ಸಂಘಗಳನ್ನು ರಚಿಸಿದ್ದಾರೆ. ವೃದ್ಧರಿಗೆ ವೃದ್ಧಾಪ್ಯ ವೇತನದ ಜೊತೆಗೆ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಅನಾರೋಗ್ಯದಿಂದ ಬಳಲುತ್ತಿರುವವರಿಗೆ ಜನಮಂಗಲ ಯೋಜನೆಯಡಿ ವೈದ್ಯಕೀಯ ವೆಚ್ಚಕ್ಕಾಗಿ ಆರ್ಥಿಕ ನೆರವನ್ನು ಡಾ. ವೀರೇಂದ್ರ ಹೆಗ್ಗಡೆ ನೀಡುತ್ತಿದ್ದಾರೆ ಎಂದು ವಸಂತ್ ದೇವಾಡಿಗ ತಿಳಿಸಿದರು.

ಕಾರ್ಯಾಗಾರವನ್ನು ಉದ್ಘಾಟಿಸಿದ ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ ಮಾತನಾಡಿ, ಜನರಿಗೆ ಸ್ವಯಂ ಉದ್ಯೋಗಕ್ಕೆ ನೆರವು ನೀಡುವ ಈ ಯೋಜನೆ ಶಿಸ್ತು, ಸಂಸ್ಕಾರವನ್ನು ಕಲಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಜನತಾವಾಣಿ' ವರದಿಗಾರ ಜಿಗಳಿ ಪ್ರಕಾಶ್ ಮಾತನಾಡಿ, ಈ ಯೋಜನೆ ಸಾಮಾಜಿಕ ಜವಾಬ್ದಾರಿ ಹೊತ್ತಿದ್ದು, ದೇಶಕ್ಕೇ ಮಾದರಿಯಾಗಿದೆ ಎಂದರು. ಮಲೇಬೆನ್ನೂರು ಮೇಲ್ವಿಚಾರಕ ಸಂತೋಷ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಯೋಜನಾ ಕಚೇರಿಯ ಲೆಕ್ಕ ಪರಿಶೋಧಕ ಚಿದಂಬರ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ ರಕ್ಷಿತಾ, ಜಿಗಳಿ ಒಕ್ಕೂಟದ ಅಧ್ಯಕ್ಷ ಎಂ.ಬಿ. ರುದ್ರಗೌಡ, ನಂದಿತಾವರೆ ವಲಯ ಮೇಲ್ವಿಚಾರಕರಾದ ಪದ್ಮಾವತಿ, ಜಿಗಳಿ ಸೇವಾ ಪ್ರತಿನಿಧಿ ಶೋಭಾ ಮತ್ತು ಇತರರು ಭಾಗವಹಿಸಿದ್ದರು.

## ಶಿಕ್ಷಣ ನೀತಿ ವಿರೋಧಿಸಿ ಪ್ರತಿಭಟನೆ

**(1ನೇ ಪುಟದಿಂದ)** ಅನುಷ್ಠಾನಕ್ಕೆ ತಂದಿದ್ದು, ತರಗತಿಗಳು ಆರಂಭವಾಗಿದ್ದರೂ ಸಹ ಸರ್ಕಾರದ ಬಳಿ ಪಠ್ಯಕ್ರಮ ತಯಾರಿಲ್ಲ, ಪಠ್ಯಪುಸ್ತಕಗಳು ಇಲ್ಲ. ಆ ಮೂಲಕ ರಾಜ್ಯದ ಶಿಕ್ಷಕ ವರ್ಗ, ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಅಂಧಕಾರದಲ್ಲಿದೆ ಎಂದು ಎಐಡಿಎಸ್‌ಓನ ಪೂಜಾ ನಂದಿಹಳ್ಳಿ ಅಭಿಪ್ರಾಯಪಟ್ಟರು.

ಈ ನೀತಿಯಲ್ಲಿ ಪ್ರಸ್ತಾಪವಾಗಿರುವ ಹಲವು ಅಂಶಗಳು ನೇರವಾಗಿ ಶಿಕ್ಷಣದ ಖಾಸಗೀಕರಣ, ಕೇಂದ್ರೀಕರಣ ಹಾಗೂ ಕೋಮುವಾದಿಕರಣಕ್ಕೆ ಕಾರಣವಾಗುತ್ತದೆ ಎಂಬುದರ ಕುರಿತು ಅಭಿಪ್ರಾಯಗಳು ಬಂದಿವೆ. ಈ ಎಲ್ಲ ಕಾರಣಗಳಿಂದ, ರಾಜ್ಯ ಸರ್ಕಾರ ಶಿಕ್ಷಣದಲ್ಲಿ ಹೇರಿರುವ ಎನ್‌ಇಪಿ-2020 ಅನ್ನು ವಾಪಸ್ ಪಡೆಯಬೇಕು. ಸರ್ಕಾರ ಶಾಲಾ ಕಾಲೇಜು ಶುಲ್ಕದ ಜೊತೆ ಬಸ್‌ಪಾಸ್ ಶುಲ್ಕವನ್ನು ಕಟ್ಟಬೇಕು ಎಂಬ ಹೊರೆಯನ್ನು ವಿದ್ಯಾರ್ಥಿಗಳ ಮೇಲೆ ಹೊರಿಸಬಾರದು. ಈ ವರ್ಷ ಎಲ್ಲ ವಿದ್ಯಾರ್ಥಿಗಳಿಗೂ ಬಸ್‌ಪಾಸ್ ಉಚಿತವಾಗಿ ನೀಡಬೇಕು ಎಂದು ಪ್ರತಿಭಟನಾ ನಿರತ ವಿದ್ಯಾರ್ಥಿಗಳು, ಎಐಡಿಎಸ್‌ಓ ಪದಾಧಿಕಾರಿಗಳು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಕಾವ್ಯ, ಸೆಕ್ರೆಟರಿಯೇಟ್ ಸದಸ್ಯೆ ಪುಷ್ಪ, ತಿಪ್ಪೇಸ್ವಾಮಿ, ವಿದ್ಯಾರ್ಥಿಗಳಾದ ನವೀನ್, ವಿನೋದ್, ದರ್ಶನ್ ಸೇರಿದಂತೆ ಇತರರು ಭಾಗವಹಿಸಿದ್ದರು.

## ರಾಣೇಬೆನ್ನೂರು: ಇಂದಿನಿಂದ 14 ರವರೆಗೆ ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರಿನ ಗದಗ-ಹೊನ್ನಾಳಿ ರಸ್ತೆ ಅಗಲೀಕರಣದ ಪ್ರಯುಕ್ತ ದೇವರಗುಡ್ಡ, ಶಿಡಗನಾಳ, ಚನ್ನಾಪುರ ತಾಂಡಾ, ಗುಡಗೂರು ತಾಂಡಾ, ಗುಡ್ಡದ ಆನ್ವೇರಿ, ಹುಲ್ಲತ್ತಿ, ಕಾಕೋಳ, ಕಾಕೋಳ ತಾಂಡಾ ಮತ್ತು ಕಜ್ಜರಿ ಗ್ರಾಮಗಳಲ್ಲಿ ಇಂದು ಮತ್ತು ನಾಳೆ ನ.13 ಮತ್ತು 14 ರಂದು ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ನಿರ್ಮಾಣದ ಪ್ರತಿಪಾದಕ ಸರ್ವಜ್ಞ

**(1ನೇ ಪುಟದಿಂದ)** ಸಮಾಜದಲ್ಲಿ ಸಾ ಮಾಜಿಕ ಮೌಲ್ಯಗಳನ್ನು ಒಳ ಗೊಂಡು ಜೀವನ ನಡೆಸುವ ವ್ಯಕ್ತಿ ಎಲ್ಲರಿಗೂ ಮಾದರಿ. ಆಸ್ತಿ, ಅಂತಸ್ತು, ಐಶ್ವರ್ಯಕ್ಕಿಂತ ವ್ಯಕ್ತಿತ್ವ ಬಹಳ ಮುಖ್ಯ ಎನ್ನುವುದು ಸರ್ವಜ್ಞನ ವಚನಗಳ ಸಾರ. ವ್ಯಕ್ತಿಗೆ ವ್ಯಕ್ತಿತ್ವ ಮುಖ್ಯವೇ ಹೊರತು ಅವನ ಸಂಪತ್ತು ಅಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ.

ಆಧುನಿಕ ಸಮಾಜದಲ್ಲಿ ಸಂಕಷ್ಟಗಳ ಸರಮಾಲೆ ಹೊತ್ತು ಬದುಕುತ್ತಿರುವ ಮನುಷ್ಯ ತನ್ನತನವನ್ನೇ ಕಳೆದುಕೊಂಡಿದ್ದಾನೆ. ಮನುಷ್ಯ ಸಂಬಂಧಿ ಬಾಂಧವ್ಯ, ಪ್ರೀತಿ ವಿಶ್ವಾಸಗಳಿಗಿಂತ ಹಣ ಗಳಿಕೆಯೇ ಮುಖ್ಯವಾಗಿದೆ. ಆದರೆ ಅದೆಲ್ಲವೂ ಕ್ಷಣಿಕ. ಸಂಬಂಧಗಳನ್ನು ಕಳೆದುಕೊಂಡ ಮೇಲೆ ವ್ಯಕ್ತಿ ನಶ್ವರನಾಗುತ್ತಾನೆ. ಒಬ್ಬಂಟಿತನ ಕಾಡಲು ಶುರುವಾಗುವುದು. ಕಷ್ಟ, ಖುಷಿ ಸಂಗತಿಗಳನ್ನೂ ಹಂಚಿಕೊಳ್ಳಲು ಯಾರೂ ಇಲ್ಲದಂತಾಗುತ್ತದೆ. ಅದೇ ಅವನ ಅಂತ್ಯಕ್ಕೆ ದಾರಿ ಎಂಬುದನ್ನು ವೈಜ್ಞಾನಿಕ ವಿಚಾರಗಳು ಈಗ ಖಚಿತಪಡಿಸಿದರೆ, ಅದನ್ನು ಸರ್ವಜ್ಞ 17ನೇ ಶತಮಾನದಲ್ಲಿಯೇ ಹೇಳಿದ್ದು, ಅವರು ಸರ್ವಕಾಲಕ್ಕೂ ಸಲ್ಲುವ ವಿಚಾರವಾದಿಯಾಗಿದ್ದಾರೆ ಎಂದು ವಿವರಿಸಿದರು.

ದಾವಿವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ, ಸರ್ವಜ್ಞ ಎಂಬುವವ ವ್ಯಕ್ತಿಯಲ್ಲ, ವಿಚಾರಗಳ ಶಕ್ತಿ. ಅದ್ಭುತ ಮನೋವಿಜ್ಞಾನಿ. ಅವನ ಸಾಮಾಜಿಕ ಚಿಂತನೆಗಳು, ವೈಚಾರಿಕ ಪ್ರಜ್ಞೆ, ಮಾನವೀಯ ಮೌಲ್ಯಗಳು ಪ್ರಸ್ತುತ ಸಮಾಜಕ್ಕೂ ನಿಕಟ ಎನಿಸುತ್ತವೆ. ಅವರು ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಾಧ್ಯ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸರ್ವಜ್ಞನ ವಚನಗಳನ್ನು ಕುರಿತ ಸಂಶೋಧನಾ ಲೇಖನಗಳ ಪುಸ್ತಕವನ್ನು ಕುಲಪತಿಗಳು ಮತ್ತು ಪ್ರೊ. ಶಿವಗಂಗಾ ರುಮ್ಮಾ ಬಿಡುಗಡೆ ಮಾಡಿದರು. ಚಿತ್ರದುರ್ಗ ಸ್ನಾತಕೋತ್ತರ ಅಧ್ಯಯನ ಕೇಂದ್ರದ ನಿರ್ದೇಶಕ ಡಾ. ಎಚ್. ವಿಶ್ವನಾಥ ಅವರ ಪುಸ್ತಕ ಕುರಿತು ವಿವರಿಸಿದರು. ಕುಲಸಚಿವೆ ಪ್ರೊ. ಗಾಯತ್ರಿ ದೇವರಾಜ ಸ್ವಾಗತಿಸಿದರು. ಸಂಯೋಜನಾಧಿಕಾರಿ ಡಾ. ಜಯರಾಮಯ್ಯ ವಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಿಂಡಿಕೇಟ್ ಸದಸ್ಯೆ ವಿಜಯಲಕ್ಷ್ಮಿ ಹಿರೇಮಠ, ಕನ್ನಡ ಅಧ್ಯಯನ ವಿಭಾಗದ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಕೆ ಉಪಸ್ಥಿತರಿದ್ದರು. ಡಾ. ಮಹಾಂತೇಶ ಪಾಟೀಲ ಅತಿಥಿಗಳನ್ನು ಪರಿಚಯಿಸಿದರು.

ಡಾ. ವಿಜಯ ಕುಮಾರ ಎಚ್.ಜಿ. ವಂದಿಸಿದರು. ಡಾ. ಭೀಮಾ ಶಂಕರ ಜೋಶಿ ಕಾರ್ಯಕ್ರಮ ನಿರೂಪಿಸಿದರು.


**ಅಣಬೆಗಳು ದೊರೆಯುತ್ತವೆ**
ಡಿ.ಸಿ.ಎಂ. ಟೌನ್ ಶಿಪ್‌ನಲ್ಲಿ ಅಣಬೆಗಳು ದೊರೆಯತ್ತವೆ.
**ಸಂಪರ್ಕಿಸಿ**
**08192 255433**

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
SSLC, PUC Technical & Non Tecnical Courses Pharmacy & BHMS (Goverment & Private College)
**ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್**
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
**87490 24789, 82173 02649**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**Change of Name**
**Dyamavva @ Parvatamma F. G.** W/o.Fakkirappa Beerappa Gudiyavar, **68** years resident @ # 791/1, Jayanagar 'A' Block, Nittuvalli, Near Kalidas Circle, Davangere. In my School Documents my name as **Dyamavva Madappa Pujar** after my marriage my name changed as **Parvathamma F.G** and my Husband Pension Book my name mentioned as Dyamavva. Above said both the names are me only none of else. In future all my records and transactions will be in my name as undersigned before Notary Davanagere on 13-11-2021.
Sd/- **Parvathamma F. G**

**WANTED ACCOUNTANT**
1. Position with specialization in Accountancy
2. Position with specialization in Taxation (Relevant Experience Preferred). For Construction Materials suppliers.
Candidates proficient in Tally ERP and Excel will be given preference.
**Educational Qualification:**
B.Com freshers with 70% +in all years, can Send in your Resumes.
Location: Davangere.
Email:Nithin.KS@chipsofstone.in
**Ph. 73530 35444**

**REQUIRED**
Loan Officers and Managere Urgent Basis
Salary: 10000 to 15,000/-
**88922 51149**

**ಮಹಿಳೆಯರು ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಆರ್ಡರ್, ಟೈಲರಿಂಗ್, ಅಂಗಡಿಯಲ್ಲಿ ಕೆಲಸಕ್ಕೆ.
**ಸಂಪರ್ಕಿಸಿ:** ಪ್ರೈವೇಟ್ ಬಸ್‌ಸ್ಟ್ಯಾಂಡ್ ಶಾಪ್ ನಂಬರ್.88, AVK ರಸ್ತೆ, ದಾವಣಗೆರೆ.
**78923 28599**

**ಓಂ ಶ್ರೀ ದತ್ತಾತ್ರೇಯ ಪ॥ ಶ್ರೀರಾಮ್ ಭಟ್**
ನಿಮ್ಮ ಧ್ವನಿಯ ಮೂಲಕ ನಿಮ್ಮ ಸಮಸ್ಯೆಗಳನ್ನು ಅರಿತು ಪ್ರಶ್ನೆ ಶಾಸ್ತ್ರದಿಂದ ನಿಮ್ಮ ಕಠಿಣ ಸಮಸ್ಯೆಗಳಿಗೆ 3 ದಿನಗಳ ಪರಿಹಾರ. ನಿಮ್ಮ ಒಂದು ದಿವ್ಯ ಕರೆ ನಿಮ್ಮ ಜೀವನವನ್ನು ಬದಲಿಸುತ್ತದೆ. ದೂರವಾಣಿ ಮೂಲಕ ಇಂದೇ ಕರೆ ಮಾಡಿ **ಮೊ. 98862 30791**

**ಹುಡುಗರು ಬೇಕಾಗಿದ್ದಾರೆ**
ಬ್ರಾಂಡೆಡ್ ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
**98867 57688**

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
**www.hindusmatrimony.com**
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
**ವಿಳಾಸ :** ಬಾಪಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
**94481-59303, 94834 63783**

**ಶಿಕ್ಷಕರು ಬೇಕಾಗಿದ್ದಾರೆ**
ಶ್ರೀ ತರಳಬಾಳು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ, ಬಸಾಪುರ, 21ನೇ ವಾರ್ಡ್, ದಾವಣಗೆರೆ
B.Sc, B.Ed - 02
D.Ed - 03
**94488 03836**
**95912 85527**

**WANTED**
Sales Executives (3 yrs)
Manager (5 yrs) (car)
Telecalling (F) (car)
Java-API Developer
SFDC Developer
**98444 92888**

**ಬೇಕಾಗಿದ್ದಾರೆ.**
ದಾವಣಗೆರೆ ಶಾಮನೂರು ರಸ್ತೆಯಲ್ಲಿ ನೂತನವಾಗಿ ಪ್ರಾರಂಭವಾಗುತ್ತಿರುವ ಹೋಟೆಲ್‌ಗೆ ಕೆಲಸಗಾರರು ಬೇಕಾಗಿದ್ದಾರೆ. ಸಂಪರ್ಕಿಸಿ :
**80501 42386**

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ**
**GST & INCOME TAX**
**ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
**94838 62779**


## ಕಮ್ಯುನಿಸ್ಟ್ ಸಮ್ಮತಿ

**(1ನೇ ಪುಟದಿಂದ)** ಪಕ್ಷದ 100 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಅಧ್ಯಕ್ಷರೊಬ್ಬರು ಮೂರನೇ ಅವಧಿಗೆ ಮುಂದುವರೆಯಲು ಅವಕಾಶ ನೀಡಲಾಗಿದೆ. ಕ್ಸಿ ಜಿನ್‌ಪಿಂಗ್ ಅವರು ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ, ಕೇಂದ್ರ ಸೈನಿಕ ಆಯೋಗದ ಅಧ್ಯಕ್ಷ ಸ್ಥಾನವನ್ನೂ ಹೊಂದಿದ್ದಾರೆ. ಮುಂದಿನ ವರ್ಷ ಜಿನ್‌ಪಿಂಗ್ ಅವರ ಐದು ವರ್ಷದ ಎರಡನೇ ಅವಧಿ ಮುಕ್ತಾಯವಾಗಲಿದೆ.

2018ರಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ ಅಧ್ಯಕ್ಷರು ಹೊಂದಿದ್ದ ಎರಡು ಅವಧಿಗಳ ನಿರ್ಬಂಧ ತೆಗೆದು ಹಾಕಲಾಗಿದೆ. ಇದರಿಂದಾಗಿ ಜಿನ್‌ಪಿಂಗ್ ಆಜೀವ ಅಧ್ಯಕ್ಷರಾಗುವ ಸಾಧ್ಯತೆ ಇದೆ.


॥ ಅಬಲೂರು ಬಸವೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ಜನನ 12.04.1970
ಮರಣ 08.11.2021

ಹರಿಹರ ತಾಲ್ಲೂಕು ಭಾನುವಳ್ಳಿ ಗ್ರಾಮದ ವಾಸಿ
**ದೊಡ್ಡ ಗೌಡ್ರು ಶರಣಪ್ಪ ಹಾಗೂ ಸಹೋದರರು ಮತ್ತು ಮಕ್ಕಳು** ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 8.11.2021ರ ಸೋಮವಾರ ಸಂಜೆ 08.40 ಕ್ಕೆ
ನನ್ನ ಅಣ್ಣನ ಮಗನಾದ
**ದೊಡ್ಡ ಗೌಡ್ರು ಶ್ರೀ ಬಸವರಾಜ ಪಾಟೀಲ್**
ಇವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ'ಯನ್ನು**
ದಿನಾಂಕ : 12.11.2021ನೇ ಶುಕ್ರವಾರ ಬೆಳಿಗ್ಗೆ 10.30 ಕ್ಕೆ ಹರಿಹರ ತಾಲ್ಲೂಕು ಭಾನುವಳ್ಳಿ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ, ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು :**
**ಶ್ರೀಮತಿ ಶಾಂತಮ್ಮ ಮತ್ತು ಮಕ್ಕಳು ಹಾಗೂ ಎಂ.ಕೆ. ಪಾಟೀಲ್** ಗ್ರಾ.ಪಂ. ಸದಸ್ಯರು **ಹಾಗೂ ದೊಡ್ಡಗೌಡ್ರು ವಂಶಸ್ಥರು, ಅಳಿಯಂದಿರು, ಮೊಮ್ಮಕ್ಕಳು ಬಂಧು-ಮಿತ್ರರು.**
**ಮೊ: 97410 34318, 95381 13021**

ವಿ.ಸೂ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 11.11.2021ರಂದು ಗುರುವಾರ ನಿಧನರಾದ ಆತ್ಮೀಯ ಸ್ನೇಹಿತ
**ಹುಲಿಕಟ್ಟೆ ಬೀರಪ್ಪ (ಪೆಪ್ಸಿ ಬೀರೇಶ್)**
ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತ ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

♦ **ಹೆಚ್.ಬಿ. ಗೋಣೆಪ್ಪ,** ಮಾಜಿ ಮಹಾಪೌರರು, ನಗರ ಪಾಲಿಕೆ, ದಾವಣಗೆರೆ
♦ **ಬಳ್ಳಾರಿ ಷಣ್ಮುಖಪ್ಪ,**
♦ **ಜೆ.ಡಿ. ಪ್ರಕಾಶ್,** ಮಹಾನಗರ ಪಾಲಿಕೆ ಸದಸ್ಯರು
♦ **ಶ್ರೀಮತಿ ಸುಧಾ ಇಟ್ಟಿಗುಡಿ ಮಂಜುನಾಥ್,** ಮಹಾನಗರ ಪಾಲಿಕೆ ಸದಸ್ಯರು
♦ **ಮೈಲಿ ರೇವಣ್ಣ ಎಸ್.** ♦ **ಟಿ. ರಾಜೇಶ್** ♦ **ಹೆಚ್.ಬಿ. ಜಯ್ಯಣ್ಣ**
♦ **ಬಿ. ಲಿಂಗರಾಜ್** ♦ **ಮಂಜುನಾಥ್ ಪಲ್ಯವು**
♦ **ಪೂಜಾರ್ ತಿಪ್ಪೇಶ್** ♦ **ರಮೇಶ್ ಜಿ.** ♦ **ಶೌಕತ್ ಅಲಿ**
♦ **ಕವಿರಾಜ್** ♦ **ಹೆಚ್.ಡಿ. ಉಮಾಕಾಂತ್ (ಸಚ್ಚಿ)**
♦ **ಕುರುಬರ ಕೇರಿ ಸ್ನೇಹಿತರ ಬಳಗ**

**ಶ್ರೀಮತಿ ಕೆ.ಎಸ್. ಸರ್ವಮಂಗಳಮ್ಮ ಎಲಿಗಾರ್ ನಿಧನ**



ದಾವಣಗೆರೆ ಸಿಟಿ ಕೆ.ಬಿ ಬಡಾವಣೆ, ಪೋಸ್ಟ್ ಆಫೀಸ್ ರಸ್ತೆ ವಾಸಿ ಬಿ. ಕಲಪನಹಳ್ಳಿ ದೊಡ್ಡಗೌಡ್ರ ದಿ. ಕೆ.ಎಸ್. ಜಯಶಂಕರಪ್ಪ ಎಲಿಗಾರ್ ಇವರ ಧರ್ಮಪತ್ನಿ **ಶ್ರೀಮತಿ ಕೆ.ಎಸ್. ಸರ್ವಮಂಗಳಮ್ಮ ಎಲಿಗಾರ್** (76) ಇವರು ದಿನಾಂಕ: 11.11.2021ರ ಗುರುವಾರ ಸಂಜೆ 5.55ಕ್ಕೆ ನಿಧನರಾದರು. ಪುತ್ರರಾದ ಕೆ.ಜೆ. ರವೀಂದ್ರ, ಕೆ.ಜೆ. ಶಿವಕುಮಾರ್, ಸಹೋದರ, ಸಹೋದರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ: 12.11.2021ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತರು: ಬಿ.ಕಲಪನಹಳ್ಳಿ ದೊಡ್ಡಗೌಡ್ರ ವಂಶಸ್ಥರು, ಎಲಿಗಾರ್ ವಂಶಸ್ಥರು, ದಾವಣಗೆರೆ ಹಾಗೂ ಗೌಡಪ್ಪ ವಂಶಸ್ಥರು, ಶಾಮನೂರು.**

**ಪ್ರಥಮ ವರ್ಷದ ಪುಣ್ಯಸ್ಮರಣೆ**



**ಬಿ. ಶಂಕರಮ್ಮ (ಶ್ಯಾಗಲೆ)**
**ನಿಧನ : 12.11.2020**
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಸದಾ ನಿಮ್ಮ ಸ್ಮರಣೆಯಲ್ಲಿರುವ ಮತ್ತು ನೀವು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

ಪತಿ : **ಶ್ರೀ ಬೀಸನಹಳ್ಳಿ ದೇವೇಂದ್ರಪ್ಪ,** ಶ್ಯಾಗಲೆ
ಮಕ್ಕಳಾದ : **ಶ್ರೀಮತಿ ಸುಧಾ ಡಿ.ಬಿ. ಮತ್ತು ಶ್ರೀ ಎಂ. ದೇವೇಂದ್ರಪ್ಪ ,** ದಾವಣಗೆರೆ
**ಶ್ರೀಮತಿ ಡಾ॥ ಲತಾ ಮತ್ತು ಶ್ರೀ ಡಾ॥ ಗಣೇಶ್ ಡಿ.ಬಿ.,** ದಾವಣಗೆರೆ
**ಶ್ರೀಮತಿ ಮಧು ಮತ್ತು ಶ್ರೀ ಸುರೇಶ್ ಡಿ.ಬಿ.** ಬೆಂಗಳೂರು
**ಶ್ರೀಮತಿ ವೀಣಾ ಡಿ.ಬಿ. ಮತ್ತು ಶ್ರೀ ಎಂ.ಹೆಚ್. ಜಗದೀಶ್,** ಚಿಕ್ಕಮಗಳೂರು
ಮೊಮ್ಮಕ್ಕಳು : **ಜಯಂತ್, ದಿಯಾ, ಸಾನ್ವಿ, ಪಾವನಿ, ತೇಜು, ಮೇಹ, ರೋಷಿಣಿ ಬೀಸನಹಳ್ಳಿ ವಂಶಸ್ಥರು, ಶ್ಯಾಗಲೆ ಹಾಗೂ ಬಂಧು-ಮಿತ್ರರು.**

## ಗೋಪಾನಾಳ್ : ಶ್ರೀ ದುಗ್ಗಮ್ಮದೇವಿ ದೇವಸ್ಥಾನದ ಉದ್ಘಾಟನೆ ಇಂದು

ದಾವಣಗೆರೆ, ನ.11- ತಾಲ್ಲೂಕಿನ ಗೋಪನಾಳ್ ಗ್ರಾಮದಲ್ಲಿ ಶ್ರೀ ದುಗ್ಗಮ್ಮ ದೇವಿ ದೇವಸ್ಥಾನದ ಉದ್ಘಾಟನೆ, ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಸಮಾರಂಭ ಹಾಗೂ ನೂತನ ಗೋಪುರ ಕಳಸಾರೋಹಣ ಕಾರ್ಯಕ್ರಮವು ನಾಳೆ ದಿನಾಂಕ 12ರ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ನಡೆಯಲಿದೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶಿಕ್ಷಕ ಮುರುಗೇಂದ್ರಯ್ಯ ಸಿದ್ದನಮಠ ಅವರು, ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ನಿಕಟ ಪೂರ್ವ ಅಧ್ಯಕ್ಷ ಡಾ.ಹೆಚ್.ಎಸ್. ಮಂಜುನಾಥ ಕುರ್ಕಿ ಉದ್ಘಾಟನೆ ನೆರವೇರಿಸಲಿದ್ದಾರೆ ಎಂದು ತಿಳಿಸಿದರು.

ಗ್ರಾಮದ ಮುಖಂಡ ಜಿ.ಕರಿಬಸಪ್ಪ ಮಾತನಾಡಿ, ಸುಮಾರು 40 ಲಕ್ಷ ರೂ. ವೆಚ್ಚದಲ್ಲಿ ದೇವಸ್ಥಾನ ನಿರ್ಮಿಸಲಾಗಿದ್ದು, ಎಲ್ಲಾ ಜಾತಿ ಜನತೆಯ ಸಹಕಾರವೂ ಇದೆ. ಕಾರ್ಯಕ್ರಮದ ಜೊತೆಗೆ ಗ್ರಾಮದ ಎಲ್ಲಾ ಪ್ರಾಥಮಿಕ, ಪ್ರೌಢಶಾಲೆ, ಕಾಲೇಜುಗಳ ಸಹಯೋಗದಲ್ಲಿ ರಾಜ್ಯೋತ್ಸವ ಕಾರ್ಯಕ್ರಮವೂ ನಡೆಯಲಿರುವುದಾಗಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಬಸವರಾಜಪ್ಪ, ಶೇಖರಪ್ಪ, ಕೆ.ಎಸ್. ನಾಗಭೂಷಣ್, ಮಹೇಂದ್ರಪ್ಪ, ಕಲ್ಲಪ್ಪ ಇತರರು ಉಪಸ್ಥಿತರಿದ್ದರು.

# ವೀರಶೈವ ಲಿಂಗಾಯತ ಬೇರ್ಪಡಿಸಲು ಸಾಧ್ಯವಿಲ್ಲ



**(1ನೇ ಪುಟದಿಂದ)** ಸಲಹೆ ನೀಡಿದರು.

ಮೈಸೂರಿನ ಶ್ರೀ ಶಿವರಾತ್ರೀಶ್ವರ ಜಗದ್ಗುರುಗಳು, ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರುಗಳು, ಬಳ್ಳಾರಿಯ ಶ್ರೀಗಳು, ನಾಡಿನ ಹರ ಗುರು ಚರಮೂರ್ತಿಗಳು ಹಾಲಕೆರೆ ಜಗದ್ಗುರು ಡಾ. ಅಭಿನವ ಅನ್ನದಾನ ಮಹಾಸ್ವಾಮಿಗಳು, ಶ್ರೀ ಮುಪ್ಪಿನ ಬಸವಲಿಂಗ ದೇವರು ಸೇರಿದಂತೆ ಹರ ಗುರು ಚರಮೂರ್ತಿಗಳು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ದಾವಣಗೆರೆಯ ಶ್ರೀ ಅನ್ನದಾನೇಶ್ವರ ಶಾಖಾ ಮಠದ ಅಧ್ಯಕ್ಷರೂ ಆಗಿರುವ ಕೈಗಾರಿಕೋದ್ಯಮಿ ಅಥಣಿ ಎಸ್.ವೀರಣ್ಣ, ಮಾಜಿ ಸಂಸದ ಜಿ.ಎಸ್. ಪಾಟೀಲ್, ಶಾಸಕ ಕಳಕಪ್ಪ ಬಂಡಿ ಮತ್ತಿತರರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

**ದಾವಣಗೆರೆ ಭಕ್ತರ ತಂಡ :** ನೂತನ ಜಗದ್ಗುರುಗಳ ಪಟ್ಟಾಧಿಕಾರ ಮಹೋತ್ಸವದಲ್ಲಿ ದಾವಣಗೆರೆಯ ಶ್ರೀ ಅನ್ನದಾನೀಶ್ವರ ಶಾಖಾ ಮಠದ ಪ್ರಧಾನ ಕಾರ್ಯದರ್ಶಿ ಎಂ ಅಡಿವೆಪ್ಪ, ಟ್ರಸ್ಟಿಗಳಾದ ದಾವಣಗೆರೆ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ.ಬಾವಿ ಸೇರಿದಂತೆ ಅನೇಕ ಭಕ್ತರು, ಅಕ್ಕನ ಬಳಗದವರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

# ಯುರೋಪ್ ಮತ್ತೆ ತತ್ತರ

**(1ನೇ ಪುಟದಿಂದ)** ಅನ್ನು ಐದು ಪ್ರಾಂತ್ಯಗಳು ಮಾತ್ರ ವಿಸ್ತರಿಸಿವೆ.

ಜರ್ಮನಿಯಲ್ಲಿ ಒಂದೇ ದಿನ ಕಂಡು ಬರುವ ಕೊರೊನಾ ಸೋಂಕಿತರ ಸಂಖ್ಯೆ 50 ಸಾವಿರದ ಹತ್ತಿರಕ್ಕೆ ಸಮೀಪಿಸುತ್ತಿದೆ. ಜರ್ಮನಿಯಲ್ಲಿ ಇದೇ ಮೊದಲ ಬಾರಿಗೆ ಇಷ್ಟೊಂದು ಸಂಖ್ಯೆಯ ಸೋಂಕಿತರು ಕಂಡು ಬರುತ್ತಿದ್ದಾರೆ.

ಲಸಿಕೆ ಪಡೆಯದವರಿಂದಾಗಿ ಈ ಪರಿಸ್ಥಿತಿ ಉಂಟಾಗಿದೆ ಎಂದು ಜರ್ಮನಿಯ ಆರೋಗ್ಯ ಸಚಿವರಾದ ಜೆನ್ಸ್ ಸ್ಪಾನ್ ಹೇಳಿದ್ದಾರೆ. ದೇಶದಲ್ಲೀಗ ದಾಖಲೆ ಸಂಖ್ಯೆಯಲ್ಲಿ ಲಸಿಕೆ ಕೊಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಜೆಕ್ ರಿಪಬ್ಲಿಕ್ ಹಾಗೂ ನೆರೆಯ ಸ್ಲೋವೇಕಿಯಾಗಳಲ್ಲಿ ಕೊರೊನಾ ಸೋಂಕಿತರು ಆಸ್ಪತ್ರೆಗೆ ದಾಖಲಾಗುವ ಸಂಖ್ಯೆ ನಿರಂತರವಾಗಿ ಏರುತ್ತಿದೆ. ಸ್ಲೊವಿಕೇಯಾದ 55 ಲಕ್ಷ ಜನರ ಪೈಕಿ 24 ಲಕ್ಷ ಜನರು ಮಾತ್ರ ಪೂರ್ಣ ಲಸಿಕೆ ಪಡೆದಿದ್ದಾರೆ. ಯುರೋಪ್ ಒಕ್ಕೂಟದಲ್ಲಿ ಅತಿ ಕಡಿಮೆ ಲಸಿಕೆ ಪಡೆದ ದೇಶಗಳಲ್ಲಿ ಸ್ಲೋವೇಕಿಯ ಸಹ ಒಂದಾಗಿದೆ.

ಡೆನ್ಮಾರ್ಕ್‌ನಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಲಸಿಕೆ ಪಡೆಯದವರ ಮೇಲೆ ಹಲವಾರು ನಿರ್ಬಂಧಗಳನ್ನು ಹೇರಲಾಗುತ್ತಿದೆ. ಕೊರೊನಾ, ಫ್ಲು ಹಾಗೂ ಇತರೆ ರೋಗಗಳ ಕಾರಣದಿಂದಾಗಿ ಆಸ್ಪತ್ರೆಗಳಿಗೆ ದಾಖಲಾಗುತ್ತಿರುವ ಸಂಖ್ಯೆ ಹೆಚ್ಚಾಗುತ್ತಿದೆ. ಇನ್ನಷ್ಟು ಸೋಂಕು ಪ್ರಕರಣ ಎದುರಿಸಲು ಸಾಧ್ಯವಾಗದು ಎಂದು ಆಸ್ಪತ್ರೆಗಳು ಕಳೆದ ವಾರ ತಿಳಿಸಿದ್ದವು.

ಫ್ರಾನ್ಸ್ ಈಗ ಐದನೇ ಕೊರೊನಾ ಅಲೆ ಎದುರಿಸುತ್ತಿದೆ ಎಂದು ಅಲ್ಲಿನ ಆರೋಗ್ಯ ಸಚಿವ ಒಲಿವಿಯರ್ ವೆರನ್ ಹೇಳಿದ್ದಾರೆ. ಕಳೆದ ತಿಂಗಳು ಮಕ್ಕಳು ಮಾಸ್ಕ್ ಧರಿಸುವುದರಿಂದ ವಿನಾಯಿತಿ ನೀಡಲಾಗಿತ್ತಾದರೂ, ಈಗ ಮತ್ತೆ ಮಾಸ್ಕ್ ಕಡ್ಡಾಯಗೊಳಿಸಲಾಗಿದೆ. ಫ್ರಾನ್ಸ್ ಅತಿ ಹೆಚ್ಚು ಲಸಿಕೆ ಪಡೆದ ದೇಶಗಳಲ್ಲಿ ಒಂದಾಗಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಲಸಿಕೆ ಪಡೆಯುವ ವೇಗ ಕಡಿಮೆಯಾಗಿದೆ. ಗ್ರೀಕ್ ದೇಶದಲ್ಲಿ ಕೊರೊನಾ ಸೋಂಕಿತರು ಕಂಡು ಬರುವ ಪ್ರಮಾಣ ಶೇ.185ರಷ್ಟು ಹೆಚ್ಚಾಗಿದೆ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ. ಇದರಿಂದಾಗಿ ಲಸಿಕೆ ಪಡೆಯದವರು ಬ್ಯಾಂಕ್, ಸರ್ಕಾರಿ ಇಲಾಖೆ ಹಾಗೂ ಅಂಗಡಿಗಳಿಗೆ ಪ್ರವೇಶಿಸುವಾಗ ಕೊರೊನಾ ನೆಗೆಟಿವ್ ಪ್ರಮಾಣ ಪತ್ರ ಹೊಂದುವುದನ್ನು ಕಡ್ಡಾಯಗೊಳಿಸಲಾಗಿದೆ.

## ಡಿಡಿಸಿಸಿ ಬ್ಯಾಂಕ್ ಭ್ರಷ್ಟಾಚಾರ : ಆರೋಪ

ದಾವಣಗೆರೆ, ನ.11- ಡಿಡಿಸಿಸಿ ಬ್ಯಾಂಕಿನ ಹೊನ್ನಾಳಿ ಶಾಖೆಯ ಕಟ್ಟಡ ಕಾಮಗಾರಿಯಲ್ಲಿ ಭ್ರಷ್ಟಾ ಚಾರ ನಡೆದಿದೆ ಎಂದು ಆರೋಪಿಸಿರುವ ವಕೀಲ ಎಸ್. ಪರಮೇಶ್, ಬ್ಯಾಂಕಿನ ಆಡಳಿತ ಮಂಡಳಿ ಯನ್ನು ಸೂಪರ್ ಸೀಡ್ ಮಾಡಿ, ಆಡಳಿತಾಧಿಕಾರಿ ಯನ್ನು ನೇಮಿಸುವಂತೆ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಮಗಾರಿ ಆರಂಭವಾಗದಿದ್ದರೂ ಗುತ್ತಿಗೆದಾರರಿಗೆ 5 ಲಕ್ಷ ರೂ. ಮುಂಗಡ ಹಣ ನೀಡಲಾಗಿದೆ. ಈ ಬಗ್ಗೆ ಆಡಳಿತ ಮಂಡಳಿ ಸಭೆಯಲ್ಲೂ ಠರಾವು ಪಾಸಾಗಿಲ್ಲ ಎಂದು ದೂರಿದರು. ಹೊಸ ಕಟ್ಟಡ ಶಾಖೆಯ ಅಳತೆ 30x50 ಅಡಿ ಇದ್ದು, ಆದರೆ ಸ್ಥಳದಲ್ಲಿ 376.90 ಚದುರಡಿ ಬಿಲ್ಡಿಂಗ್ ಇರುವುದಾಗಿ ಎಸ್ಟಿಮೇಷನ್ ಮಾಡಿ ಇಲ್ಲದಿರುವ ಕಟ್ಟಡವನ್ನು ಇದೆ ಎಂದು ದಾಖಲೆ ಸೃಷ್ಟಿಸಿ ಅಕ್ರಮವಾಗಿ ಬಿಲ್ ಗಳನ್ನು ಸೃಷ್ಟಿ ಮಾಡಿ ಕೋಟಿಗಟ್ಟಲೇ ಹಣ ಡ್ರಾ ಮಾಡಲು ಹೊರಟಿದ್ದಾರೆ ಎಂದು ಅವರು ಗಂಭೀರ ಆರೋಪ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ವಕೀಲರುಗಳಾದ ದೇವರಾಜ್, ಯೋಗೇಶ್ ಉಪಸ್ಥಿತರಿದ್ದರು.

# ಈಶ್ವರ, ಆಂಜನೇಯ, ಕುಕ್ಕುವಾಡೇಶ್ವರಿ ದೇವಸ್ಥಾನಗಳ ಉದ್ಘಾಟನೆ

**ಅಣಬೇರು ಗ್ರಾಮದಲ್ಲಿ ನಾಳೆ - ನಾಡಿದ್ದು**

ದಾವಣಗೆರೆ, ನ. 11- ತಾಲ್ಲೂಕಿನ ಅಣಬೇರು ಗ್ರಾಮದಲ್ಲಿ ನಾಡಿದ್ದು ದಿನಾಂಕ 13ರ ಶನಿವಾರ ಮತ್ತು 14 ರ ಭಾನುವಾರ ಶ್ರೀ ಈಶ್ವರ, ಶ್ರೀ ಆಂಜನೇಯ ಸ್ವಾಮಿ, ಶ್ರೀ ಕುಕ್ಕುವಾಡೇಶ್ವರಿ ದೇವಿ ದೇವಸ್ಥಾನಗಳ ಉದ್ಘಾಟನೆ, ಮೂರ್ತಿ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಸಮಾರಂಭ ಹಮ್ಮಿಕೊಳ್ಳಲಾಗಿದೆ.

13 ರ ಶನಿವಾರ ಸಂಜೆ ಗೋಧೂಳಿ ಲಗ್ನದಲ್ಲಿ ನೂತನ ದೇವರುಗಳನ್ನು ಗ್ರಾಮ ದರ್ಶನ ಮಾಡಿಸುವುದು. 14 ರ ಭಾನುವಾರ ಬೆಳಿಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿ 4.30 ರಿಂದ 8.30 ರವರೆಗೆ ಗಂಗಾ ಪೂಜೆ, ಪುಣ್ಯಾಹ ನಾಂದಿ ಸಮಾರಾಧಸಿ ಪಂಚಕಲಶ ನವಗ್ರಹ ಮೃತ್ಯುಂಜಯ ಪೂಜೆ, ದೇವರುಗಳಿಗೆ ಕುಂಭಾಭಿಷೇಕ, ವಸ್ತ್ರಾಲಂಕಾರ, ಪುಷ್ಪಾಲಂಕಾರ, ಫಲ ಅಲಂಕಾರ ಹಾಗೂ ಶ್ರೀಗಳಿಂದ ಪ್ರಾಣ ಪ್ರತಿಷ್ಠಾಪನೆ, ನೇತ್ರೋನ್ಮಿಲನ, ಜೀವಕಳೆ ಕಳಸಾರೋಹಣ ನೆರವೇರಿಸಲಾಗುವುದು.

ಬೆಳಿಗ್ಗೆ 10.30 ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ, ಹೆಬ್ಬಾಳು ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ, ಕನಕ ಗುರು ಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ದೇವಸ್ಥಾನಗಳ ಸಮಿತಿ ಅಧ್ಯಕ್ಷ ಕೆ.ಸಿ. ರಾಜಪ್ಪ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ, ಪ್ರೊ. ಎನ್. ಲಿಂಗಣ್ಣ, ಬಯಲುಸೀಮೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಣಬೇರು ಜೀವನಮೂರ್ತಿ, ಅಪೂರ್ವ ಹೋಟೆಲ್ ಗ್ರೂಪ್ಸ್ ಮಾಲೀಕ ಅಣಬೇರು ರಾಜಣ್ಣ, ಜಿ.ಪಂ. ಮಾಜಿ ಅಧ್ಯಕ್ಷರಾದ ಅಣಬೇರು ಪಾರ್ವತಮ್ಮ, ಶೈಲಜಾ ಬಸವರಾಜ್, ತಾಪಂ ಸಾಮಾಜಿಕ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷರಾದ ಮಂಜುಳಾ ಶಿವಮೂರ್ತಿ, ಅಣಬೇರು ಗ್ರಾ.ಪಂ. ಅಧ್ಯಕ್ಷರಾದ ಕಾವ್ಯ ಬಿ.ಸಿ ಅಶೋಕ್ ಭಾಗವಹಿಸಲಿದ್ದಾರೆ.

# ಹೋರಾಟ ಅಂತಿಮ ಹಂತದಲ್ಲಿದೆ

**(1ನೇ ಪುಟದಿಂದ)** ತಿಳಿಸಿದ್ದಾರೆ.

ಮನೆ ಮನೆಗೆ ತೆರಳಿ ಲಸಿಕೆ ನೀಡುವ ಮೂಲಕ ಎಲ್ಲ ವಯಸ್ಕರು ಮೊದಲ ಡೋಸ್ ಲಸಿಕೆ ಪಡೆಯುವಂತೆ ಮಾಡಲೂ ಸಹ ರಾಜ್ಯಗಳು ಕ್ರಮ ತೆಗೆದುಕೊಳ್ಳಬೇಕೆಂದು ಅವರು ಹೇಳಿದ್ದಾರೆ. ರಾಜ್ಯಗಳ ಆರೋಗ್ಯ ಸಚಿವರ ಜೊತೆ ಆನ್‌ಲೈನ್ ಮೂಲಕ ಸಭೆ ನಡೆಸಿದ ಮಾಂಡವೀಯ, ಕೊರೊನಾ ವಿರುದ್ಧದ ಹೋರಾಟ ಅಂತಿಮ ಹಂತದಲ್ಲಿದೆ ಎಂದಿದ್ದಾರೆ.

ಲಸಿಕೆ ಹಾಗೂ ಕೊರೊನಾ ತಡೆಗಾಗಿ ಎಚ್ಚರಿಕೆ ವಹಿಸುವುದರಿಂದ ಸೋಂಕನ್ನು ತಡೆಗಟ್ಟಬಹುದಾಗಿದೆ. ಹೋರಾಟ ಸಂಪೂರ್ಣ ಮುಗಿಯುವವರೆಗೂ ಎಚ್ಚರ ತಪ್ಪಬಾರದು ಎಂದು ಮಾಂಡವೀಯ ಹೇಳಿದ್ದಾರೆ.

ಪ್ರಸಕ್ತ ಶೇ.79ರಷ್ಟು ಜನರು ಮೊದಲ ಡೋಸ್ ಹಾಗೂ ಶೇ.38ರಷ್ಟು ಜನರು ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ. ಸಂಘಟಿತ ಪ್ರಯತ್ನದ ಮೂಲಕ ಎಲ್ಲ ವಯಸ್ಕರು ಕೊರೊನಾ ಲಸಿಕೆ ಪಡೆಯುವಂತೆ ಮಾಡಬೇಕು. ದೇಶದ ಮೂಲೆ ಮೂಲೆಗಳಿಗೆ, ಪ್ರತಿ ಮನೆಗೆ ತೆರಳಿ ಜನರು ಲಸಿಕೆ ಪಡೆಯುವಂತೆ ಮಾಡಬೇಕು ಎಂದವರು ತಿಳಿಸಿದ್ದಾರೆ.

ಲಸಿಕೆಯಿಂದ ಕೊರೊನಾ ತೀವ್ರತೆ ತಗ್ಗುತ್ತದೆ. ಆದರೆ, ಸೂಕ್ತ ವರ್ತನೆಯ ಮೂಲಕ ಕೊರೊನಾ ಸೋಂಕು ಹರಡದಂತೆ ತಡೆಯುವುದು ಮುಖ್ಯವಾಗಿದೆ. ಆ ಮೂಲಕ ಮತ್ತೊಮ್ಮೆ ಕೊರೊನಾ ಅಲೆ ಬರದಂತೆ ತಡೆಯಬೇಕಿದೆ ಎಂದು ಸಚಿವರು ತಿಳಿಸಿದ್ದಾರೆ. ಸಭೆ ಯಲ್ಲಿ ಕೊರೊನಾ ತಡೆಗಾಗಿ ರಾಜ್ಯಗಳು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಪರಿಶೀಲಿಸಲಾಯಿತು.

## ಹರಿಹರ : ಇಂದು ವಿದ್ಯುತ್ ವ್ಯತ್ಯಯ

ಚಿಂತಾಮಣಿ ನಗರ, ಹಳೆ ಹರ್ಲಾಪುರ, ವಾಟರ್ ವರ್ಕರ್ಸ್, ಅಮರಾವತಿ ಕಾಲೋನಿ, ಮಜ್ಜಿಗೆ ಲೇಔಟ್, ಆಶ್ರಯ ಕಾಲೋನಿ, ವಿಜಯನಗರ, ಕೆ.ಆರ್. ನಗರ, ಹೊಸ ಹರ್ಲಾಪುರ, ಬಸ್ ಡಿಪೋ ರಸ್ತೆ, ಕಿರ್ಲೋಸ್ಕರ್ ಕಾಲೋನಿ, ಹಳೆ ಪಿ.ಬಿ. ರಸ್ತೆ, ಭರಂಪುರ, ಕೆಐಎಡಿಬಿ, ಇಂಡಸ್ಟ್ರೀಯಲ್ ಏರಿಯಾ, ಕೆಎಚ್‌ಬಿ ಕಾಲೋನಿ, ಅಮರಾವತಿ ಗ್ರಾಮ, ಆಂಜನೇಯ ಬಡಾವಣೆ, ಪೊಲೀಸ್ ಕ್ವಾಟರ್ಸ್, ಕೇಶವ ನಗರ, ರೈಲ್ವೇ ಸ್ಟೇಷನ್, ಬಸ್‌ಸ್ಟ್ಯಾಂಡ್, ಪಿ.ಬಿ. ರೋಡ್, ಟಿಪ್ಪು ನಗರ, ಪಟೇಲ್ ಬಡಾವಣೆಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಗ್ರಾಮೀಣ ಪ್ರದೇಶಗಳಾದ ದೊಗ್ಗಳ್ಳಿ, ಗಂಗನರಸಿ, ಗಂಗನರಸಿ ಕ್ಯಾಂಪ್, ಗುತ್ತೂರು ಐಪಿ ವಲಯ, ದೀಟೂರು, ಪಾಮೇನಹಳ್ಳಿ, ಕರಲಹಳ್ಳಿ ಮಠ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಪೂರೈಕೆ ವ್ಯತ್ಯಯವಾಗಲಿದೆ.

## ಅನ್‌ಮೋಲ್ ವಿದ್ಯಾಸಂಸ್ಥೆ : ಗೀತೆಗಳ ಗಾಯನ ನಿತ್ಯೋತ್ಸವ ತರಬೇತಿ ಇಂದು

ಅನ್‌ಮೋಲ್ ವಿದ್ಯಾಸಂಸ್ಥೆಯಿಂದ 'ನಿತ್ಯೋತ್ಸವ' ಕನ್ನಡ ಗೀತೆಗಳ ಗಾಯನ ತರಬೇತಿ ಶಿಬಿರವನ್ನು ಹಮ್ಮಿಕೊಂಡಿದ್ದು, ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಯಶಾ ದಿನೇಶ್ ಗಾಯನ ತರಬೇತಿ ನೀಡಲಿದ್ದಾರೆ. ಕನ್ನಡದ ವಿವಿಧ ಗೀತ ಪ್ರಕಾರಗಳಾದ ನಾಡಗೀತೆ, ದೇಶಭಕ್ತಿ ಗೀತೆ, ವಚನ, ಜನಪದ ಗೀತೆ, ತತ್ವ ಪದ, ರಂಗ ಗೀತೆ ಮುಂತಾದ 10 ಗೀತೆಗಳ ತರಬೇತಿ ನೀಡುವರು. ಈ ಶಿಬಿರವು ಇಂದು ಮತ್ತು ನಾಳೆ ನಡೆಯಲಿದ್ದು, ಸಂಸ್ಥೆಯ ಅಧ್ಯಕ್ಷ ಸಿ.ಜಿ. ದಿನೇಶ್ ಅವರು ಇಂದು ಮಧ್ಯಾಹ್ನ 1.30ಕ್ಕೆ ಶಿಬಿರವನ್ನು ಉದ್ಘಾಟಿಸುವರು.

# ಬಿಟ್ ಕಾಯಿನ್ ವಿಚಾರ ಬಿಟ್ಹಾಕಿ

**(1ನೇ ಪುಟದಿಂದ)** ಯೋಜನೆ ಪ್ರಸ್ತಾಪಿಸಿ ಪಂಚಾಯತ್‌ಗಳನ್ನು ಮತ್ತಷ್ಟು ಬಲಿಷ್ಠಗೊಳಿಸಿ, ಜನರ ಮನೆ ಬಾಗಿಲಿಗೆ ಆಡಳಿತ ಕೊಂಡೊಯ್ಯಿರಿ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರಲು ಹಿರಿಯ ಅಧಿಕಾರಿಗಳನ್ನು ಉಸ್ತುವಾರಿಯಾಗಿ ನೇಮಿಸಿ ಎಂದು ಸಲಹೆ ಮಾಡಿದರು.

ಟೆಂಡರ್‌ಗಳಲ್ಲಿ ನಡೆಯುತ್ತಿರುವ ಅವ್ಯವಹಾರ ತಪ್ಪಿಸಲು ರಾಜ್ಯ ಸರ್ಕಾರ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿರುವುದನ್ನು ಪ್ರಧಾನಿ ಶ್ಲಾಘಿಸಿದರು.

ಟೆಂಡರ್ ನೀಡಿಕೆಯಲ್ಲಿ ಭಾರೀ ಹಗರಣಗಳು ನಡೆಯುತ್ತಿವೆ, ಇವೇ ಭ್ರಷ್ಟಾಚಾರಕ್ಕೆ ಮೂಲವಾಗಿದ್ದು, ಇಂತಹವುಗಳಿಗೆ ಕಡಿ ವಾಣ ಹಾಕಬೇಕೆಂದು ಅವರು ಹೇಳಿದರು.

ರಾಜ್ಯದಲ್ಲಿ ನಡೆದ ವಿಧಾನಸಭಾ ಉಪಚುನಾವಣೆಗಳನ್ನು ನಾನೇ ಪ್ರಸ್ತಾಪಿಸಿ, ಎರಡು ಕ್ಷೇತ್ರಗಳಲ್ಲಿ ಸೋಲು-ಗೆಲುವನ್ನು ಕಂಡಿದ್ದೇವೆ ಎಂದಾಗ, ಪ್ರಧಾನಿ ಅವರು, ಇದು ಸಹಜ. ನೀವು 2023ರ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಿ, ಜನರ ವಿಶ್ವಾಸ ಗಳಿಸಿ ಎಂದರು.

ಅಮಿತ್ ಷಾ ಮತ್ತು ನಡ್ಡಾ ಅವರ ಭೇಟಿ ಸಂದರ್ಭದಲ್ಲೂ ಬಿಟ್ ಕಾಯಿನ್ ಪ್ರಸ್ತಾಪ ಆಗಿಲ್ಲ, ಗೃಹ ಸಚಿವರನ್ನು ಸ್ವಲ್ಪ ಸಮಯವಷ್ಟೇ ಭೇಟಿ ಮಾಡಲು ಸಾಧ್ಯವಾಯಿತು ಎಂದು ಬೊಮ್ಮಾಯಿ ಹೇಳಿದ್ದಾರೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ವಿಧಾನ ಪರಿಷತ್ತಿನ 25 ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಗೆ ಸಂಬಂಧಿಸಿದಂತೆ ಮಾತನಾಡಿದರು, ಆದಷ್ಟು ಶೀಘ್ರ ಕಣಕ್ಕಿಳಿಯಲಿರುವ ಅಭ್ಯರ್ಥಿಗಳ ಪಟ್ಟಿಯನ್ನು ಕಳುಹಿಸಿ ಕೊಡಿ, ಹೆಚ್ಚು ಸ್ಥಾನಗಳಲ್ಲಿ ಗೆಲುವು ಸಾಧಿಸಲು ಈಗಿನಿಂದಲೇ ಕೆಲಸ ಮಾಡಿ ಎಂದಿದ್ದಾರೆ ಎಂದರು.

## ಮುಖ್ಯಮಂತ್ರಿ ಬದಲಾವಣೆ ಇಲ್ಲ

**(1ನೇ ಪುಟದಿಂದ)** ನೀಡುತ್ತಿದ್ದಾರೆ. ಬದಲಾವಣೆಯ ಹೇಳಿಕೆ ಮೂಲಕ ಜನರಲ್ಲಿ ಗೊಂದಲ ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದರು.

ಕಟೀಲ್ ಅವರು ರಾಜ್ಯಾಧ್ಯಕ್ಷರಾದ ನಂತರ ಅವರ ನೇತೃತ್ವದಲ್ಲಿ ಉಪ ಚುನಾವಣೆಗಳು, ಕಾರ್ಪೊರೇಷನ್ ಚುನಾವಣೆಗಳಲ್ಲಿ ಗೆಲುವು ಸಾಧಿಸಲಾಗಿದೆ. ಕೊರೊನಾ ಸಂದರ್ಭದಲ್ಲಿ ಕಟೀಲ್ ಪಕ್ಷ ಸಂಘಟನೆ ಮಾಡಿ ಮುನ್ನಡೆಸುತ್ತಿದ್ದಾರೆ. ಅವರ ಬದಲಾವಣೆ ಎಂಬ ಹೇಳಿಕೆಗಳು ಆಧಾರ ರಹಿತ ಎಂದೂ ವಿಜಯೇಂದ್ರ ತಿಳಿಸಿದ್ದಾರೆ.

ವಾಲ್ಮೀಕಿ ಸಮುದಾಯದ ಮೀಸಲಾತಿ ವಿಷಯದಿಂದ ಬಿಜೆಪಿಗೆ ಹಿನ್ನಡೆಯಾಗಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಮುಖ್ಯಮಂತ್ರಿ ಬೊಮ್ಮಾಯಿ ಅವರು ವಾಲ್ಮೀಕಿ ಸಮುದಾಯ ಅಷ್ಟೇ ಅಲ್ಲದೇ, ಬೇರೆ ಬೇರೆ ಸಮುದಾಯದ ಭಾವನೆಗಳನ್ನು ಪರಿಗಣಿಸಿ ಚರ್ಚಿಸುತ್ತಿದ್ದಾರೆ. ಬರುವ ದಿನಗಳಲ್ಲಿ ಎಲ್ಲ ಸಮುದಾಯಗಳಿಗೆ ನ್ಯಾಯ ಸಿಗಲಿದೆ ಎಂದರು.

ಹಾನಗಲ್ ಸೋಲಿನ ಕುರಿತು ಪ್ರತಿಕ್ರಿಯಿಸಿದ ಅವರು, ಎಲ್ಲ ಮುಖಂಡರು ಪ್ರಯತ್ನ ನಡೆಸಿದ್ದರೂ ಎಲ್ಲೋ ಒಂದು ಕಡೆ ಎಡವಿದ್ದೇವೆ. ನಿರೀಕ್ಷೆಗೆ ತಕ್ಕ ಹಾಗೆ ಮತದಾರರು ಸಹಕಾರ ಕೊಟ್ಟಿಲ್ಲ. ತಪ್ಪಾಗಿರುವ ಕಡೆ ಸರಿಪಡಿಸಿಕೊಳ್ಳುತ್ತೇವೆ ಎಂದರು.

## ಹರಿಹರದಲ್ಲಿಂದು ಮಾಜಿ ಯೋಧರ ಸಮಾವೇಶ

ಜಿಲ್ಲಾ ಪ್ಯಾರಾ ಮಿಲ್ಟ್ರಿ ಸೊಸೈಟಿ ವತಿಯಿಂದ ಕೇಂದ್ರೀಯ ಪ್ಯಾರಾಮಿಲ್ಟ್ರಿ ಪಡೆಗಳ ಮಾಜಿ ಯೋಧರ ಸಮಾವೇಶವು ಇಂದು ಬೆಳಿಗ್ಗೆ 10.30 ಕ್ಕೆ ಹರಿಹರದಲ್ಲಿ ನಡೆಯಲಿದೆ.

## ಸಹಕಾರ ಸಪ್ತಾಹ ತಾತ್ಕಾಲಿಕ ಮುಂದೂಡಿಕೆ

ಬೆಂಗಳೂರು, ನ. 11 - ವಿಧಾನಪರಿಷತ್‌ನ 25 ಸ್ಥಾನಗಳಿಗೆ ಸ್ಥಳೀಯ ಸಂಸ್ಥೆಗಳಿಂದ ಡಿಸೆಂಬರ್ 10ರಂದು ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ನೀತಿ ಸಂಹಿತೆ ಜಾರಿಯಾಗಿರುವುದರಿಂದ ಈ ಬಾರಿ ನವೆಂಬರ್ 14ರಿಂದ ನಡೆಯಬೇಕಿದ್ದ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ಮುಂದೂಡ ಲಾಗಿದೆ. ಸಹಕಾರ ಸಪ್ತಾಹ ಕಾರ್ಯಕ್ರಮದ ಮುಂದಿನ ದಿನಾಂಕವನ್ನು ನಂತರದಲ್ಲಿ ತಿಳಿಸಲಾಗುವುದು ಎಂದು ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ.

# ನಗರ ಮತ್ತು ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಂಸಿಸಿ 'ಬಿ' ಬ್ಲಾಕ್, ಸಿದ್ಧವೀರಪ್ಪ ಬಡಾವಣೆ, ಎಸ್.ಎಸ್. ಲೇಔಟ್ ಎ ಮತ್ತು ಬಿ ಬ್ಲಾಕ್, ಎಂಸಿಸಿ ಬಿ ಬ್ಲಾಕ್, ಕುವೆಂಪು ನಗರ, ನಿಜಲಿಂಗಪ್ಪ ಬಡಾವಣೆ, ಮೌನೇಶ್ವರ ಬಡಾವಣೆ, ನಿಟ್ಟುವಳ್ಳಿ, ಲೆನಿನ್ ನಗರ, ಸರಸ್ವತಿ ನಗರ, ಶಕ್ತಿ ನಗರ, ಡಿಸಿಎಂ ಟೌನ್‌ಶಿಪ್, ಕೊಟ್ಟೂರೇಶ್ವರ ಬಡಾವಣೆ, ಕೆಎಸ್‌ಆರ್‌ಟಿಸಿ, ಭಗತ್ ಸಿಂಗ್ ನಗರ, ಈರುಳ್ಳಿ ಮಾರುಕಟ್ಟೆ, ತರಕಾರಿ ಮಾರುಕಟ್ಟೆ, ಕೆಟಿಜೆ ನಗರ, ಕೆ.ಬಿ. ಬಡಾವಣೆ, ಪಿ.ಜೆ. ಬಡಾವಣೆ, ಈದ್ಗಾ ಕಾಂಪ್ಲೆಕ್ಸ್, ವಿನೋಬನಗರ, ಎಸ್.ಎಸ್. ಬಿ ಬ್ಲಾಕ್, ಬಾಲಾಜಿ ನಗರ, ಬಸವೇಶ್ವರ ನಗರ, ರೆಹಮಾನ್ ರಸ್ತೆ, ಕೊರಚರ ಹಟ್ಟಿ, ದೇವರಾಜ್ ಕ್ವಾಟರ್ಸ್, ಇಂದಿರಾ ನಗರ, ಕಾರ್ಲ್‌ಮಾರ್ಕ್ಸ್ ನಗರ, ಸಿದ್ಧರಾಮೇಶ್ವರ ಬಡಾವಣೆ, ಮಂಡಕ್ಕಿ ಭಟ್ಟಿ, ಶಿವಪಾರ್ವತಿ ನಗರ, ಮಂಡಿಪೇಟೆ, ಬಿನ್ನಿ ಕಂಪನಿ ರಸ್ತೆ, ಅಮೆಜಾನ್ ಬಾಬಾಜಾನ್ ದರ್ಗಾ, ಜೋಗಲ್ ಬಾಬಾ ಲೇಔಟ್, ದುರ್ಗಾಂಬಿಕ ಬಡಾವಣೆ, ಹೊಸ ಮತ್ತು ಹಳೆ ಚಿಕ್ಕನಹಳ್ಳಿ ಬಡಾವಣೆ, ಎಂಸಿಸಿ ಬಿ ಬ್ಲಾಕ್, ದೇವರಾಜ್ ಅರಸ್ ಬಡಾವಣೆ ಎ, ಬಿ ಮತ್ತು ಸಿ ಬ್ಲಾಕ್, ಮಹಾನಗರ ಪಾಲಿಕೆ, ಎಂ.ಬಿ. ಕೇರಿ, ಚಲುವಾದಿ ಕೇರಿ, ಹೊಂಡದ ವೃತ್ತ, ಜಾಲಿ ನಗರ, ದುರ್ಗಾಂಬಿಕ ದೇವಸ್ಥಾನದ ಹತ್ತಿರ, ಇ.ಡಬ್ಲ್ಯೂ ಎಸ್. ಕಾಲೋನಿ, ಗಣೇಶ್ ರಾವ್ ವೃತ್ತ. ಇಎಸ್‌ಐ ಆಸ್ಪತ್ರೆ.

ಆರ್‌ಎಂಸಿ ಲಿಂಕ್ ರಸ್ತೆ, ಬಿ.ಟಿ. ಲೇಔಟ್, ಗುಜರಿ ಲೈನ್, ಬಂಬೂ ಬಜಾರ್, ಮಟ್ಟಿಕಲ್, ಬಿಡಿಓ ಕಚೇರಿ, ಇಮಾಂ ನಗರ, ಅಮರಪ್ಪನ ತೋಟ, ಆನೆಕೊಂಡ, ಎಲ್‌ಬಿಎಸ್ ನಗರ, ಟಿ.ಸಿ. ಲೇಔಟ್, ಬಿಟಿ ಲೇಔಟ್, ಕೆ.ಆರ್. ರಸ್ತೆ, ಇಮಾಮ್ ನಗರ, ಆನೆಕೊಂಡ, ಐನಳ್ಳಿ ಕಾಂಪೌಂಡ್, ಎಪಿಎಂಸಿ, ಭಾರತ್ ಕಾಲೋನಿ, ಶೇಖರಪ್ಪ ನಗರ, ಹೆಚ್.ಕೆ.ಆರ್. ನಗರ, ಕಬ್ಬೂರು, ಬಸಾಪುರ, ಅಣ್ಣಾ ನಗರ, ಬಸಾಪುರ ರಸ್ತೆ, ಗೋಶಾಲೆ, ಪಿ.ಬಿ. ರಸ್ತೆ, ರವಿ ಮಿಲ್ ಹಾಗೂ ಆವರಗೆರೆ, ಹೊನ್ನೂರು, ಐಗೂರು, ಮಲ್ಲಶೆಟ್ಟಿಹಳ್ಳಿ, ತೋಳಹುಣಸೆ, ದಾವಣಗೆರೆ ವಿ.ವಿ ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಕರೂರು ಇಂಡಸ್ಟ್ರಿಯಲ್ ಏರಿಯಾ, ಡಿ.ಸಿ. ಕಚೇರಿ, ಜಿಎಂಐಟಿ, ಬಸವೇಶ್ವರ ನಗರ, ರಶ್ಮಿ, ಹರಿಹರ ರಸ್ತೆ, ವಿಜಯನಗರ, ಅಶೋಕ ನಗರ, ಆರ್‌ಟಿಓ ಕಚೇರಿ, ಎಸ್.ಪಿ. ಕಚೇರಿ, ರಿಂಗ್ ರಸ್ತೆ, ಶಿಬಾರ, ಎಸ್.ಎಂ.ಕೆ. ನಗರ ಹಾಗೂ ಚಿತ್ತಾನಹಳ್ಳಿ, ಕಕ್ಕರಗೊಳ್ಳ, ನೀಲಾನಹಳ್ಳಿ, ದೇವರಹಟ್ಟಿ, ದೊಡ್ಡಬಾತಿ, ಹಳೇಬಾತಿ, ನಾರಾಯಣ ಕ್ಯಾಂಪ್, ಯರಗುಂಟೆ, ಕೋಡಿಹಳ್ಳಿ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು.

ಮೆಳ್ಳೇಕಟ್ಟೆ ಉಪಕೇಂದ್ರದ ಆಲೂರು, ಬಿ.ಜಿ. ಹಳ್ಳಿ, ಸಿದ್ಧನೂರು, ಮಲ್ಲಾಪುರ, ಗುಡಾಳು, ಅಣಜಿ, ಕಿತ್ತೂರು, ಕಂದನಕೋವಿ, ಮೆಳ್ಳೇಕಟ್ಟೆ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳು ಮತ್ತು ಕಾಡಜ್ಜಿ ಉಪಕೇಂದ್ರದ ರೆಡ್ಡಿ ಕ್ಯಾಂಪ್, ಪುಟಗನಾಳು, ಶ್ರೀರಾಮ ನಗರ, ಕಾಡಜ್ಜಿ, ಬಸವನಾಳು, ನಾಗರಕಟ್ಟೆ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

## ದಕ್ಷಿಣ ಭಾರತ ಹಿರಿಯರ ಖೋಖೋ ಪಂದ್ಯಾವಳಿಗೆ ಆಯ್ಕೆ

ದಾವಣಗೆರೆ, ನ.11- ನಾಳೆ ದಿನಾಂಕ 12 ರಿಂದ 14 ರವರೆಗೆ ತೆಲಂಗಾಣದ ಹನುಮಕೊಂಡದಲ್ಲಿ ನಡೆಯುವ 30ನೇ ದಕ್ಷಿಣ ಭಾರತ ಹಿರಿಯರ ಖೋ-ಖೋ ಪಂದ್ಯಾವಳಿಯಲ್ಲಿ ಭಾಗವಹಿಸುವ ರಾಜ್ಯ ಪುರುಷರ ತಂಡಕ್ಕೆ ದಾವಣಗೆರೆ ಕ್ರೀಡಾ ವಸತಿ ನಿಲಯದ, ಜಿಲ್ಲಾ ಪಂಚಾಯತ್ ವಲಯದ ಕ್ರೀಡಾಪಟುಗಳಾದ ಅರ್ಜುನ್ ಮತ್ತು ಮಹಮ್ಮದ್ ತಾಸೀನ್ ಅವರು ಆಯ್ಕೆಯಾಗಿರುತ್ತಾರೆ.

ಕ್ರೀಡಾಪಟುಗಳಿಗೆ ಇಲಾಖೆಯ ಖೋ-ಖೋ ತರಬೇತುದಾರರಾದ ಜೆ.ರಾಮಲಿಂಗಪ್ಪ ಅವರು ತರಬೇತಿ ನೀಡುತ್ತಿದ್ದಾರೆ.

## ನಗರದಲ್ಲಿ ಇಂದು ಸರಕು ಸಾಗಾಣಿಕೆ ಕಾನೂನು ಅಂಶಗಳ ವಿಚಾರ ವಿನಿಮಯ

ಲಯನ್ಸ್ ಕ್ಲಬ್ ವತಿಯಿಂದ ಸರಕು ಸಾಗಾಣಿಕೆ ಕಾನೂನಾತ್ಮಕ ಅಂಶಗಳ ಬಗ್ಗೆ ವಿಚಾರ ವಿನಿಮಯ ಕಾರ್ಯಾಗಾರವು ಇಂದು ಸಂಜೆ 5.30 ಕ್ಕೆ ನಡೆಯಲಿದೆ. ಅಧ್ಯಕ್ಷತೆಯನ್ನು ಎಸ್. ಓಂಕಾರಪ್ಪ ವಹಿಸುವರು. ಪರಮೇಶ್ವರಗೌಡ ಮತ್ತು ಆರ್.ವಿ. ನಟರಾಜ್ ಸಂಪನ್ಮೂಲ ವ್ಯಕ್ತಿಗಳಾಗಿದ್ದಾರೆ.


**ಬೇಕಾಗಿದ್ದಾರೆ**

S.S.L.C/PUC/Degree ಆದ ಕಂಪ್ಯೂಟರ್ ಜ್ಞಾನವಿರುವ ಪುರುಷ ಕೆಲಸಗಾರರು ಬೇಕಾಗಿದ್ದಾರೆ.

ತಕ್ಷಣ ಸಂಪರ್ಕಿಸಿ :

**ಜ್ಯೋತಿ ಗ್ಯಾಸ್ ಏಜೆನ್ಸಿ**

1ನೇ ಕ್ರಾಸ್, ಅಶೋಕ ರಸ್ತೆ, ದಾವಣಗೆರೆ.

99645 96070, 08192 235060-6

**LOURDES BOY'S HIGH SCHOOL**

P.J. Extension, Davangere., Contact : 99802 44377

**WANTED TEACHERS**

| Sl.No. Post | Qualification | Subject |
|---|---|---|
| 1) Lower Primary School-01 | P.U.C. DEd., | All Subjects |
| 2) Higher Primary School-01 | B.Sc. or B.A., B.Ed., | All Subjects |
| 3) High School-01 | B.A. or M.A., B.Ed., | (English & Social) |
| 4) High School-01 | B.Sc., or M.Sc., B.Ed. | (Science CBZ) |

Eligible Candidates with Fluency in English and having minimum one year of teaching experience may walk in for the interview on 15.11.2021. Reporting time for the interview is between 10.am to 11.30 am. Candidates should bring application along with Bio-Data/Resume with necessary documents.

**ಶ್ರೀ ನಂದಿ ಸೌಹಾರ್ದ ಸಹಕಾರಿ ನಿಯಮಿತ, ಮಲೇಬೆನ್ನೂರು.**

ಪ್ರಧಾನ ಕಛೇರಿ, ಮಲೇಬೆನ್ನೂರು, ಶಾಖೆ : ನಂದಿಗುಡಿ, ಹರಿಹರ ತಾಲ್ಲೂಕು

**ಸೌಹಾರ್ದ ಸಹಕಾರಿಯ 2020-2021ನೇ ಸಾಲಿನ ದ್ವಿತೀಯ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ನೋಟಿಸ್**

2020-21ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿ. : 13.11.2021ನೇ ಶನಿವಾರ ಮಧ್ಯಾಹ್ನ 3.00 ಗಂಟೆಗೆ ಶ್ರೀ ರಾಜರಾಜೇಶ್ವರಿ ವಿದ್ಯಾಸಂಸ್ಥೆ (ರಿ.) ಜಿಗಳಿ ರಸ್ತೆ, ಮಲೇಬೆನ್ನೂರಿನಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಹೆಚ್. ವೀರನಗೌಡ ಇವರ ಘನ ಅಧ್ಯಕ್ಷತೆಯಲ್ಲಿ ಮಹಾಸಭೆಯನ್ನು ಕರೆಯಲಾಗಿದೆ. ಆದ್ದರಿಂದ ಮಾನ್ಯ ಸರ್ವ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ.

**ಸೌಹಾರ್ದ ಸಹಕಾರಿ ಪ್ರಗತಿಯ ಪಕ್ಷಿನೋಟ**

| ವಿವರಗಳು | ದಿನಾಂಕ : 31.03.2020ಕ್ಕೆ | ದಿನಾಂಕ : 31.03.2021ಕ್ಕೆ |
|---|---|---|
| 1) ಷೇರು ಬಂಡವಾಳ | 64,88,300-00 | 69,86,300-00 |
| 2) ಸದಸ್ಯರ ಸಂಖ್ಯೆ | 2,772 | 2,769 |
| 3) ಠೇವಣಾತಿಗಳು | 8,94,80,023-50 | 10,44,25,888 |
| 4) ನಿಧಿಗಳು | 2,18,18,183-36 | 2,41,86,444 |
| 5) ಸದಸ್ಯರಿಗೆ ಸಾಲ | 7,81,62,594-00 | 8,28,43040 |
| 6) ವಾರ್ಷಿಕ ವಹಿವಾಟು | 41,06,85,004-27 | 41,59,38,489 |
| 7) ದುಡಿಯುವ ಬಂಡವಾಳ | 13,17,45,694-00 | 14,72,45,574 |
| 8) ನಿವ್ವಳ ಲಾಭ | 28,25,646-00 | 29,12,256 |
| 9) ಆಡಿಟ್ ಶ್ರೇಣಿ | 'ಬಿ' | 'ಬಿ' |
| 10) ಸದಸ್ಯರಿಗೆ ಡಿವಿಡೆಂಡ್ | 11 % | 11 % ಉದ್ದೇಶಿತ |

**ಸಂಘದ ಆಡಳಿತ ಮಂಡಳಿ**



ಹೆಚ್. ವೀರನಗೌಡ್ರು, ಅಧ್ಯಕ್ಷರು, ಹಳ್ಳಿಹಾಳ್ | ಶ್ರೀಮತಿ ಶೋಭಾ ಬಿ.ಜಿ. ಪಾಲಾಕ್ಷಪ್ಪ, ಉಪಾಧ್ಯಕ್ಷರು, ಜಿ.ಬೇವಿನಹಳ್ಳಿ | ಇಂದೂಧರ ಎನ್. ರುದ್ರಗೌಡ, ನಿರ್ದೇಶಕರು, ಜಿಗಳಿ. | ಹೆಚ್.ಟಿ. ಶಾಂತನಗೌಡ, ನಿರ್ದೇಶಕರು, ಹಳ್ಳಿಹಾಳ್. | ಗೌಡ್ರ ಬಸವರಾಜಪ್ಪ, ನಿರ್ದೇಶಕರು, ಜಿಗಳಿ. | ಹೆಚ್.ಟಿ. ಪರಮೇಶ್ವರಪ್ಪ, ನಿರ್ದೇಶಕರು, ಹಳ್ಳಿಹಾಳ್.



ಎಂ.ವಿ. ನಾಗರಾಜ್, ನಿರ್ದೇಶಕರು, ಜಿಗಳಿ | ಬಿ.ಹೆಚ್. ರವಿ, ನಿರ್ದೇಶಕರು, ಕೊಕ್ಕನೂರು. | ಕೆ.ಹೆಚ್. ಆಂಜನೇಯ, ನಿರ್ದೇಶಕರು, ಕೊಕ್ಕನೂರು. | ಸಂತೋಷ್ ಪಾಳೇದ, ನಿರ್ದೇಶಕರು, ಜಿ.ಬೇವಿನಹಳ್ಳಿ. | ಶ್ರೀಮತಿ ಭಾಗ್ಯ ಉದಯಗೌಡ, ನಿರ್ದೇಶಕರು, ಹಿಂಡಸಘಟ್ಟ. | ಎ. ಆರೀಫ್ ಅಲಿ, ನಿರ್ದೇಶಕರು, ಮಲೇಬೆನ್ನೂರು.



ಟಿ. ರಾಮಚಂದ್ರಪ್ಪ, ನಿರ್ದೇಶಕರು, ಕೊಕ್ಕನೂರು. | ಆರ್. ನಾಗರಾಜ, ನಿರ್ದೇಶಕರು, ಕೊಕ್ಕನೂರು. | ಎ.ಕೆ. ತಿಪ್ಪೇಶಪ್ಪ, ನಿರ್ದೇಶಕರು, ಹಳ್ಳಿಹಾಳ್. | ಹೆಚ್.ಎಂ. ಬಸವರಾಜ್, ಕಾರ್ಯದರ್ಶಿ

**ಸೂಚನೆ :** ಇತ್ತೀಚಿನ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಯ ಪ್ರಕಾರ ಸಹಕಾರಿಯ ಸದಸ್ಯರು ಸಹಕಾರಿಯ 5 ವಾರ್ಷಿಕ ಮಹಾಸಭೆಗಳಲ್ಲಿ ಕನಿಷ್ಠ ಯಾವುದೇ 2 ಮಹಾಸಭೆಗಳಿಗೆ ಹಾಜರಾಗುವುದು ಹಾಗೂ 2 ವರ್ಷಗಳಲ್ಲಿ 1ವರ್ಷಕ್ಕೆ ಕನಿಷ್ಠ 1000/- ರೂ.ಗಳ ವ್ಯವಹಾರವನ್ನು ಮಾಡುವುದು ಕಡ್ಡಾಯ. ಇವುಗಳನ್ನು ಪಾಲಿಸದೇ ಇದ್ದಲ್ಲಿ ಮುಂಬರುವ ಆಡಳಿತ ಮಂಡಳಿ ಚುನಾವಣೆಯಲ್ಲಿ ಪಾಲ್ಗೊಳ್ಳಲು ಹಾಗೂ ಮತ ಚಲಾಯಿಸಲು ಅನರ್ಹರಾಗುತ್ತಾರೆ.

ವಿ.ಸೂ. : ಈಗಾಗಲೇ ಸಂಘದ ಎಲ್ಲಾ ಸದಸ್ಯರಿಗೆ ಆಹ್ವಾನ ಪತ್ರಿಕೆಗಳನ್ನು ಕಳಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ. ಸಭೆಗೆ ಆಗಮಿಸುವ ಸದಸ್ಯರು ಕಡ್ಡಾಯವಾಗಿ ಮಾಸ್ಕ್ ಧರಿಸಿ, ಸಾಮಾಜಿಕ ಅಂತರವನ್ನು ಕಾಪಾಡಬೇಕಾಗಿ ವಿನಂತಿ.

**ಸವಿತಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ನಂ. 1352/2, ಶ್ರೀ ಎಸ್. ವರದರಾಜ ಕಾಂಪ್ಲೆಕ್ಸ್, ಮೊದಲನೇ ಮಹಡಿ, ಬಾಪೂಜಿ ಆಸ್ಪತ್ರೆ ರಸ್ತೆ, ದಾವಣಗೆರೆ.

Email : savithasociety271329@gmail.com. Ph : 08192 271329, Cell : 97429 42626

**2020-21ನೇ ಸಾಲಿನ ವಾರ್ಷಿಕ ಮಹಾಸಭೆಯ ಆಹ್ವಾನ**

**ದಿನಾಂಕ: 13.11.2021ನೇ ಶನಿವಾರ ಮಧ್ಯಾಹ್ನ 12.00 ಗಂಟೆಗೆ**

**ಸ್ಥಳ : ಶ್ರೀ ಸವಿತಾ ಮಹರ್ಷಿ ಸಮುದಾಯ ಭವನ,**

ಶ್ರೀ ಮಾರುತಿ ಮಂದಿರ ಎದುರು, ಕೊಂಡಜ್ಜಿ ರಸ್ತೆ, ದಾವಣಗೆರೆ.

ವಿಶೇಷ ಸೂಚನೆ :

* ವಾರ್ಷಿಕ ಮಹಾಸಭೆಗೆ ಬರುವಾಗ ಎಲ್ಲಾ ಸದಸ್ಯರು ತಪ್ಪದೇ ವಾರ್ಷಿಕ ವರದಿಯನ್ನು ತರಬೇಕಾಗಿ ಕೋರಿದೆ.
* ಕೋವಿಡ್-19 ಇರುವುದರ ಪ್ರಯುಕ್ತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಾರ್ಗಸೂಚಿ ಅನ್ವಯ ಮಾಸ್ಕ್ ಧರಿಸುವುದು ಹಾಗೂ ಸಾಮಾಜಿಕ ಅಂತರ ಪಾಲಿಸುವುದು. ಸ್ಯಾನಿಟೈಸರ್ ಬಳಸುವುದನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
* ಕೋವಿಡ್-19 ಪ್ರಯುಕ್ತ, ಉಪಹಾರ, ಭೋಜನ ವ್ಯವಸ್ಥೆ ಇರುವುದಿಲ್ಲ. ದಯವಿಟ್ಟು ಸದಸ್ಯರು ಸಹಕರಿಸಬೇಕು.

ಮಾನ್ಯ ಸದಸ್ಯರುಗಳಿಗೆ ಈಗಾಗಲೇ ಮಹಾಸಭೆಯ ನೋಟೀಸ್‌ಗಳನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು, ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಸಭೆಗೆ ಆಗಮಿಸಲು ವಿನಂತಿಸಲಾಗಿದೆ. ಷೇರುದಾರರು ತಮ್ಮ ವಿಳಾಸದಲ್ಲಿ ಬದಲಾವಣೆಯಾದಲ್ಲಿ ಅದನ್ನು ಸೊಸೈಟಿಗೆ ಲಿಖಿತ ಮೂಲಕ ತಿಳಿಸಿ, ಸಹಕರಿಸಿ.

ಶ್ರೀ ಎನ್. ರಂಗಸ್ವಾಮಿ, ವಕೀಲರು, ಅಧ್ಯಕ್ಷರು | ಶ್ರೀ ಜೆ.ಸಿ. ಶ್ರೀನಿವಾಸ್, ಉಪಾಧ್ಯಕ್ಷರು | ಕಾರ್ಯಕಾರಿ ಮಂಡಳಿ ಅಪ್ಪಣೆಯ ಮೇರೆಗೆ (ಶ್ರೀ ಡಿ. ವೆಂಕಟೇಶ್ ನಾಯ್ಕ) ಕಾರ್ಯದರ್ಶಿ

